CC-O. In Public Domain. Digitized by eGangotri

ಕಲಿಯುಗದ ಕಾಲಜ್ಞಾನವು

ಶ್ರೀ ರುದ್ರಮುನಿಸ್ವಾಮಿ. ಬಸವಣ್ಣನವರು. ನೀಲಮ್ಮನವರ ಜ್ಞಾನಮಾರ್ಗ ತತ್ವಗಳು
ಮತ್ತು ಸರ್ವಜ್ಞಮೂರ್ತಿ ನಿರೂಪಿಸಿದ ಕಾಲಜ್ಞಾನವು

ಟಿ.ವಿ.ಕೃಷ್ಣಪ್ಪ ಪ್ರಕಾಶನ
ಚಿಕ್ಕಪೇಟೆ • ಬೆಂಗಳೂರು-560053

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀರಸ್ತು

ಕಲಿಯುಗದ ಕಾಲಜ್ಞಾನವು

ಶ್ಲೋಕ|| ನತ್ವಾಕಾತ್ಯಾಯಿನೀ ಕಾಂತಂ ಕಾಲಕಾಲಂ
ಕೃಪಾನಿಧಿಂ । ವಕ್ಷ್ಯಾಮಿ ಕಾಲಜ್ಞಾನಂಚ
ಕಲಿಕಾಲ ವಿಲಾಸಿನಂ ||

ಮೃತ್ಯುಂಜಯನಾಗಿಯೂ, ಕರುಣಾಸಮುದ್ರನಾಗಿಯೂ, ಸರ್ವ ಭೂತಾಂತರ್ಯಾಮಿಯಾಗಿಯೂ, ನಿರ್ಮಲವಾಗಿಯೂ ಇರುವ ಪಾರ್ವತೀ ಪತಿಯನ್ನು ನಮಸ್ಕರಿಸಿ ಕಲಿಯುಗದ ಕಾಲವಿಲಾಸನೆಂಬ ಕಾಲಜ್ಞಾನವನ್ನು ಹೇಳುವೆನು :—

ಶ್ಲೋಕ|| ಕಲೌ ಪಂಚ ಸಹಸ್ರಾಂತೇ ಜಾಯತೇ ವರ್ಣಸಂಕರಃ||
ಕಲೌ ಪಂಚ ಸಹಸ್ರಾಂತೇ ವಿಷ್ಣುಸ್ತ್ಯಕ್ಷ್ಯತಿಮೇದಿನೀಂ||

ಎಂಬ ರೀತಿಯಾಗಿ ಕಲಿಯುಗದ ಮೊದಲನೇ ಪಾದದಲ್ಲಿ ಐದು ಸಾವಿರ ವರ್ಷಗಳ ಅಂತ್ಯದಲ್ಲಿ ಜಾತಿ-ಮತಗಳ ಸಾಂಕರ್ಯವಾಗುವುದೆಂತಲೂ, ಪ್ರಪಂಚ ಪಾಲಕನಾದ ಶ್ರೀ ವಿಷ್ಣುವು ಪೃಥ್ವಿಯನ್ನು ಬಿಡುವನೆಂತಲೂ, ಕಲಿಯುಗದಲ್ಲಿ ನಡೆಯುವ ಮಹಿಮೆಗಳನ್ನು ನಾರದ ಮಹರ್ಷಿಗೆ ಬ್ರಹ್ಮನು ಹೇಳಿದುದನ್ನು ಈಗ ಇಲ್ಲಿ ವಿವರಿಸುವರು.

ಸತ್ಯಲೋಕದಲ್ಲಿ ಒಂದಾನೊಂದು ದಿನ ಬ್ರಹ್ಮನು ವಾಣೀದೇವಿಯ ಸಮೇತ ಸಮಸ್ತ ದೇವತೆಗಳಿಂದಲೂ ಸ್ತೋತ್ರಾರ್ಹನಾಗಿ ಸಿಂಹಾಸನದಲ್ಲಿ ಕುಳಿತಿರಲು, ಮುನಿಶ್ರೇಷ್ಠನಾಗಿಯೂ, ವೀಣಾಧರನಾಗಿಯೂ ಇರುವ ನಾರದ ಮುನಿಯು ಅಲ್ಲಿಗೆ ಬಂದು ಬ್ರಹ್ಮನಿಗೆ ನಮಸ್ಕಾರಮಾಡಿ ಸ್ತುತಿಸಿ ಕುಳಿತು ಕೊಂಡು "ಎಲೈ ಬ್ರಹ್ಮನೇ, ನಿನ್ನಿಂದ ಕೃತ-ತ್ರೇತಾ-ದ್ವಾಪರಯುಗಗಳ ಮಹಿಮಾತಿಶಯಗಳನ್ನು ಕೇಳಿದೆನು. ಆದರೆ ಈಗ ಕಲಿಯುಗದ ಮಹಿಮಾ ವಿಶೇಷಗಳನ್ನು ಕೇಳಬೇಕೆಂದು ಆಸೆಯುಂಟಾಗಿದೆ" ಎಂದು ಪ್ರಾರ್ಥಿಸಲಾಗಿ ಬ್ರಹ್ಮನು ನಾರದನನ್ನು ಕುರಿತು, ಕಲಿಯುಗದ ಧರ್ಮವನ್ನು ಹೇಳಿದನು. ಎಂದು ಸೂತನು ಶೌನಕಾದಿಗಳಿಗಿಂತೆಂದನು :—

Sri Vidyabharathi Book Centre, Sringeri

CC-O. In Public Domain. Digitized by eGangotri

"ಎಲೌ ಶಾನಕಾದಿಗಳಿರಾ ! ಕಲಿಯುಗದಲ್ಲಿ ಕಲಿಪ್ರಾಬಲ್ಯದ ಕಾರಣದಿಂದ ಧರ್ಮ ಸತ್ಯಾದಿಗಳು ನಾಶವಾಗಿ, ಪಾಪಗಳು ಅಭಿವೃದ್ಧಿಯಾಗಿ ಬ್ರಹ್ಮಹತ್ಯೆ, ಶಿಶುಹತ್ಯೆ, ಭ್ರೂಣಹತ್ಯೆ, ಮಾತಾಪಿತೃಹಿಂಸೆ, ಸ್ವಾಮಿ, ಗುರು, ಭ್ರಾತೃ, ಮಿತ್ರದ್ರೋಹಗಳು, ಸ್ವರ್ಣಸ್ತೇಯ, ಮದ್ಯಮಾಂಸಾದಿ ಭಕ್ಷಣಗಳು ಇನ್ನೂ ಅನೇಕ ವಿಧವಾದ ಮಹಾ ಪಾಪಕೃತ್ಯಗಳನ್ನಾಚರಿಸುತ್ತ, ಜನರು ವ್ಯಭಿಚಾರಿಗಳಾಗಿ ಮತಧರ್ಮಗಳನ್ನು ಬಿಟ್ಟು ಕಾಮ, ಕ್ರೋಧ, ಲೋಭ, ಮೋಹ, ಶೋಕ, ಭ್ರಾಂತಿಪರವಶರಾಗಿ ಈಶ ವಿಷ್ಣ್ವಾದಿ ದೇವತೆಗಳಲ್ಲಿ ಭಕ್ತಿಯನ್ನು ತೊರೆದು, ಶಾಂತಿ, ದಯಾ ಶಮದಾದಿ ವರ್ಜಿತರಾಗಿ ದುರ್ಮಾರ್ಗದಲ್ಲಿ ಪ್ರವೇತಿಸುತ್ತಿರಲು, ಕಲಿಪುರುಷನು ಅತ್ಯಾನಂದದೊಡನೆ ತಾನು ಸಕಲಲೋಕಗಳನ್ನು ಮೋಹಿಸಿರಲು, ಭೂಲೋಕದವರು ಧರ್ಮಾದಿಗಳನ್ನು ಬಿಟ್ಟು ಪಾಪಮಾರ್ಗನಿರತರಾಗಿರುವರು. ಈ ರೀತಿಯಾಗಿ ಕಲಿಯು ಪ್ರಬಲವಾಗಲು, ಧರ್ಮಪುರುಷನು ಅತಿ ಖಿನ್ನನಾಗಿ ವನಗುಹಾದಿಗಳನ್ನೂ, ರಹಸ್ಯವಾದ ನದೀಮೂಲಗಳನ್ನೂ, ದೇವಾಲಯಗಳನ್ನೂ, ಕುಲೀನ ಪದ್ಮವನಗಳನ್ನೂ, ಗಂಗಾದಿ ಜಲಸ್ಥಳಗಳಲ್ಲಿ ಭೇದಿಸಲಾಗದ ಸ್ಥಳಗಳನ್ನೂ ಹೊಕ್ಕು ಕಲಿಭೀತಿಯಿಂದ ಅಡಗಿಕೊಳ್ಳಲು, ಕಲಿಯು ಸ್ವಪ್ರಕಾಶವನ್ನು ಹೆಚ್ಚಿಸುವನು. ಘೋರ ಪಾಪಿಗಳೇ ಜನಿಸಿ ಧರ್ಮವನ್ನು ನಿರಾಕರಿಸುತ್ತಾ ಬರಲು, ಯಜ್ಞ ಯಾಗಾದಿ ಸತ್ಕರ್ಮಗಳಿಲ್ಲದಂತಾಗಿ ಭೂಭಾರವು ಹೆಚ್ಚುವುದು. ಆಗ ಭೂದೇವಿಯು ಬಾಧೆಯನ್ನೂ, ಭಾರವನ್ನೂ ಸಹಿಸಲಾರದೆ ಭೀತಿಯಿಂದ ಗೋರೂಪಧರಳಾಗಿ ಸ್ವರ್ಗವನ್ನು ಕುರಿತು, ಅನೇಕ ದೇವತೆಗಳಿಂದೊಡಗೂಡಿ ಸಭಾಸೀನನಾದ ಇಂದ್ರನ ಸಮೀಪಕ್ಕೆ ಹೋಗಿ ಬೀಳಲು, ಅಲ್ಲಿದ್ದ ದೇವತೆಗಳು ಗಾಬರಿಯಿಂದ ಭ್ರಾಂತರಾದರು. ಇಂದ್ರನು, ಪೀಠದಿಂದಿಳಿದು ಬಂದು ಭೂದೇವಿಯನ್ನು ಮೇಲಕ್ಕೆತ್ತಿ ಸಂತೈಸಿ, "ಎಲೈ ತಾಯೆ ! ಏನು ಕಾರಣ ಶೋಕಿಸುವೆ ? ನಿನ್ನ ಅಂಗಗಳು ಕುಂದಲು ಕಾರಣವೇನು ?" ಎನ್ನಲು, ಭೂದೇವಿಯು "ಎಲೈ ಇಂದ್ರನೇ ? ಭೂಲೋಕದಲ್ಲಿ ಜನರು ಸ್ವಧರ್ಮವನ್ನು ಬಿಟ್ಟು ಯಜ್ಞ ಯಾಗಾದಿ ರಹಿತರಾಗಿಯೂ, ಜಾರ ಚೋರತ್ವಾದಿಗಳಿಂದ ಸಹಿತರಾಗಿಯೂ ಸತ್ಕರ್ಮಾನುಷ್ಠಾನದೂರರಾಗಿಯೂ, ದುರ್ಮಾರ್ಗಪ್ರವರ್ತಕರಾಗಿಯೂ ಇರುವುದರಿಂದ ಅವರ ಭಾರವನ್ನು ತಾಳಲಾರದೆ ನಿನ್ನ ಸಮೀಪಕ್ಕೆ ಬಂದೆನು.

Sri Vidyabharathi Book Centre, Sringeri

CC-O. In Public Domain. Digitized by eGangotri

ಇದಕ್ಕೆ ತಕ್ಕ ಉಪಾಯವನ್ನು ಯೋಚಿಸಿ ನನ್ನ ಭಾರವನ್ನಿಳಿಸಬೇಕು"ಎನ್ನಲು, ಇಂದ್ರನು ಚಿಂತಾಕ್ರಾಂತನಾಗಿ, ಏನೂ ತೋರದೆ ದೇವತೆಗಳಿಂದಲೂ, ಭೂದೇವಿಯಿಂದಲೂ ಕೂಡಿ ಸತ್ಯ ಲೋಕವನ್ನು ಸೇರಿ ಬ್ರಹ್ಮನಿಗೆ ನಮಸ್ಕರಿಸಿ ಸ್ತುತಿಸಿ ಭೂದೇವಿಯ ದುಃಖವನ್ನೂ, ದೇವತೆಗಳಿಗುಂಟಾಗಿರುವ ಭೀತಿಯನ್ನು ಬಿನ್ನವಿಸಲು, ಬ್ರಹ್ಮನು ಚಿಂತಿಸಿದವನಾಗಿ, ಇಂದ್ರಾದಿಗಳೊಡನೆ ಕೈಲಾಸವನ್ನು ಹೊಕ್ಕು ಗೌರೀ ಸಮೇತನಾದ ಶಂಕರನನ್ನು ಕುರಿತು, ಕೈ ಜೋಡಿಸಿಕೊಂಡು "ಎಲೈ ಸರ್ವಲೋಕರಕ್ಷಕನಾದ ಶಂಕರನೇ, ಚಂದ್ರಚೂಡನೇ, ರಕ್ಷಿಸು" ಎಂದು ಬಹುವಿಧದಿಂದ ಪ್ರಾರ್ಥಿಸಲು, ಪರಮೇಶ್ವರನು ಬ್ರಹ್ಮೇಂದ್ರಾದಿಗಳ ಕಾರ್ಯವನ್ನು ತಿಳಿದು ಅವರೊಡನೆ ವೈಕುಂಠವನ್ನು ಪ್ರವೇಶಿಸಿ ಲಕ್ಷ್ಮೀ ಲೋಲನಾದ ಶ್ರೀ ವಿಷ್ಣುವನ್ನು ಕಂಡು ಸ್ತುತಿಸಲು, ವಿಷ್ಣುವು ಪರಮೇಶ್ವರನನ್ನು ಸತ್ಕರಿಸಿ, ಉಚಿತಾಸನದಲ್ಲಿ ಕುಳ್ಳಿರಿಸಿ, ದೇವತೆಗಳ ಕುಶಲಗಳನ್ನು ವಿಚಾರಿಸಿ, ಇಂದ್ರಾಜ್ಞೆಯಿಂದ ಮುಂಭಾಗದಲ್ಲಿ ಅಂಜಲೀಬದ್ಧಳಾಗಿ ಶೋಕಿಸುತ್ತಾ ನಿಂತಿರುವ ಭೂದೇವಿಯ ದುಃಖವನ್ನು ವಿಚಾರಿಸಿ ತಿಳಿದುಕೊಂಡು ಮಂದಹಾಸದಿಂದ ಪರಮೇಶ್ವರನನ್ನು ನೋಡಿ ಇದಕ್ಕೆ ತಕ್ಕ ಉಪಾಯವೇನು? ಈಗ ಏನು ಮಾಡಬೇಕೆಂದು ಕೇಳಲು, ಆ ಪರಶಿವನು ತನ್ನ ಅಭಿಪ್ರಾಯವನ್ನು ಸೂಚಿಸಿದನು. ಬ್ರಹ್ಮಾದಿಗಳು ಇದಕ್ಕೆ ಸಮ್ಮತಿಸಿದರು. ಶ್ರೀಹರಿಯು ಭೂದೇವಿಯನ್ನು ನೋಡಿ "ಅಮ್ಮಾ, ಭೂಭಾರವು ಪರಿಹಾರವಾಗುವುದಕ್ಕಾಗಿ ದುಷ್ಟರನ್ನು ನಾಶಮಾಡಿ, ಧರ್ಮವನ್ನುದ್ಧರಿಸಿ ನಿನ್ನನ್ನು ಸಂತೋಷಪಡಿಸುವೆನು" ಎಂದು ಸಂತೈಸಿ ಕಳುಹಿಸಿ ಬ್ರಹ್ಮನನ್ನು ಕುರಿತು ಇಂತೆಂದನು :—

"ಎಲೈ ಬ್ರಹ್ಮದೇವನೆ, ಕಲಿಯುಗದಲ್ಲಿ ಐದು ಸಾವಿರ ವರ್ಷವಾದ ಮೇಲೆ ಅತಿಯಾಗಿ ಹೆಚ್ಚಿಮೆರೆಯುತ್ತ ಭೂಮಿಗೆ ಭಾರವಾಗಿರುವ ದುಷ್ಟರನ್ನು ಸಂಹರಿಸಿ ಭೂಭಾರವನ್ನು ತಗ್ಗಿಸುವುದಕ್ಕಾಗಿ ನಾನು ಅವತರಿಸುವೆನು. ಆಗ ರುದ್ರಾಂಶಸಂಭೂತಗಳಾದ ರೋಗಪೀಡಾದಿಗಳು ಭೂಲೋಕದಲ್ಲಿ ಬಹಳವಾಗಿ ಬೆಳೆಯಲಿ. ಘೋರವಾದ ಕ್ಷಾಮಡಾಮರಗಳು ಉಂಟಾಗಲಿ. ಇಂದ್ರನೂ, ಅವನ ಅಧೀನದಲ್ಲಿರುವ ಗ್ರಹಗಳೂ ಸೇರಿ ಭೂಲೋಕದಲ್ಲಿರುವ ಸತ್ಯಧರ್ಮಗಳನ್ನು ಸೆಳೆದು ಭೂಮಿಯನ್ನು ನಿಸ್ಸಾರವಾಗಿ ಮಾಡಿ ಭೂಭಾರವನ್ನು ತಗ್ಗಿಸುವುದಕ್ಕಾಗಿ ನಾನು ಮಾಡುವ ಕಾರ್ಯಕ್ಕೆ ಸಹಾಯಕರಾಗಲಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಎಂದು ಹೇಳಿ ಎಲ್ಲರನ್ನೂ ಅವರವರ ಲೋಕಗಳಿಗೆ ಕಳುಹಿಸಿ, ನಂತರ ತಾನು

ಶ್ಲೋಕ॥ ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ।
ಅಭ್ಯುತ್ಥಾನಧರ್ಮಸ್ಯತದಾತ್ಮಾನಂ ಸೃಜಾಮ್ಯಹಂ

ಎಂಬ ಶ್ಲೋಕಕ್ಕನುಸಾರವಾಗಿ ಯಾವ ಯಾವ ಕಾಲದಲ್ಲಿ ಅಧರ್ಮ ಹೆಚ್ಚುವುದೋ ಆಯಾ ಕಾಲದೊಳು ಸ್ವಾಂಶದಿಂದ ಅವತರಿಸಿ ಸಕಲ ರೂಪಿನಿಂದ ಭೂಭಾರವನ್ನು ತೊಲಗಿಸುವೆನು. ಇನ್ನು ನೀವು ತೆರಳಿರೆಂದು ಅನುಜ್ಞೆಯನ್ನು ಕೊಡಲು ಸರ್ವರೂ ತಮ್ಮ ಸ್ಥಾನಗಳನ್ನು ನಿರ್ವಹಿಸಲೋಸುಗ ಇಂದ್ರನು ಗುರುವಾದ ಬೃಹಸ್ಪತಾಚಾರ್ಯರನ್ನು ಕರೆಯಿಸಿ, ಅರ್ಘ್ಯಪಾದ್ಯಾದಿಗಳಿಂದಪೂಜಿಸಿ ಎಲೈ ಗುರುವೆ, ಶ್ರೀವಿಷ್ಣುವಿನ ಅನುಜ್ಞೆಯಂತೆ ಭೂಭಾರವನ್ನು ತಗ್ಗಿಸಲು ತಕ್ಕ ಉಪಾಯ ಮಾಡಬೇಕೆನ್ನಲು, ಗುರುವು ಎಲ್ಲವೂ ಸಿದ್ಧವಾಗಿರುವುದೆಂದು ನುಡಿದನು. ಇಂದ್ರನು ಚಿತ್ರಕನಿಂದ ನವಗ್ರಹಗಳನ್ನೂ, ಅಷ್ಟದಿಕ್ಪಾಲಕರನ್ನೂ, ಪರ್ಜನ್ಯನನ್ನೂ ಕರೆಯಿಸಿ, ಎಲೌ ಸಭಾನಾಯಕರೇ, ಭೂಭೂರ ನಿವಾರಣೆಯು ಕೃತ್ಯ ನಿಮ್ಮೆಲ್ಲರಿಗೂ ಸೇರಿರುವುದು. ಆದುದರಿಂದ ನೀವುಗಳೆಲ್ಲರೂ ನಿಮ್ಮ ನಿಮ್ಮ ಕಾರ್ಯದಲ್ಲಿ ಜಾಗರೂಕರಾಗಿರಬೇಕೆಂದು ಹೇಳಿ ಪರ್ಜನ್ಯನನ್ನು ಕುರಿತು, ಎಲೈ ಮೇಘಾಧಿಪತಿಯೇ ;

ಅನ್ನಂ ಹಿ ಸರ್ವದಾ ನೃಣಾಂ ಪ್ರಾಣಾಧಾರಣಂ ಕಾರಣಂ

ಎಂಬಂತೆ ಮನುಷ್ಯನಿಗೆ ಅನ್ನವೇ ಪ್ರಾಣಾಧಾರಣಕ್ಕೆ ಮುಖ್ಯಕಾರಣವಾಗಿರುವುದರಿಂದ ನೀನು ಕಲಿಯುಗದ ಒಂದನೇ ಪಾದದಲ್ಲಿ ಐದು ಸಹಸ್ರ ವರ್ಷಗಳು ಕಳೆಯುವುದರೊಳಗಾಗಿ ದುರ್ಮುಖಿ ಸಂವತ್ಸರದ ಮಧ್ಯಕಾಲದಿಂದ ಶಾರ್ವರಿ ಸಂವತ್ಸರ ಪರ್ಯಂತವೂ ಈ ಕಲಿಯುಗದಲ್ಲಿ ಅಧರ್ಮವು ಪ್ರಬಲವಾಗುವುದರಿಂದ ದೇಶಾನುಗುಣವಾಗಿ ಆಗಾಗ್ಗೆ ಕ್ಷಾಮಾದಿಗಳುಂಟಾಗುವಂತೆ ಭೂಮಿಯ ಸಾರವನ್ನು ಸೆಳೆದು ಕಾಲಕಾಲಗಳೊಳು ಮಳೆ ವರ್ಷಿಸದಂತೆಯೂ, ನದೀನದಗಳಲ್ಲಿಯೂ, ವಾಪೀಕೂಪ ತಟಾಕಾದಿಗಳಲ್ಲಿಯೂ ಜಲರಹಿತವಾಗಿರುವಂತೆಯೂ ಮಾಡಿ ಕೆಲವೆಡೆಯೊಳು ವೃಷ್ಟಿರಹಿತವಾಗಿಯೂ, ಕೆಲವೆಡೆಯಲ್ಲಿ ಅತಿವೃಷ್ಟಿಯಿಂದ ಸಸ್ಯಾದಿ ಪ್ರಾಣಿಗಳನ್ನು ಮುಳುಗಿಸುತ್ತಲು, ದುರುಳರಿರುವ ಸ್ಥಳದಲ್ಲಿ ಸಿಡಿಲಿನಿಂದಲೂ, ರಕ್ತವರ್ಷ

Sri Vidyabharathi Book Centre, Shingeri

CC-O. In Public Domain. Digitized by eGangotri

ದಿಂದಲೂ, ಖಂಡವೃಷ್ಟಿಗಳಿಂದಲೂ ದುಷ್ಟರನ್ನು ಮರ್ಧನಮಾಡಿ ಧರ್ಮವನ್ನು ಪ್ರಬಲಪಡಿಸಿರೆಂದು ಆಜ್ಞಾಪಿಸಿ, ಚಂಡಮಾರುತನನ್ನು ನೋಡಿ, ಎಲೈ ವಾಯುವೇ, ನೀನು ಸುಂಟರಗಾಳಿಯಿಂದ ಗಿಡಗಳು ಒಡೆಯುವಂತೆ ಬೀಸುತ್ತಲೂ, ಧೂಳಿನಿಂದ ಸಮಸ್ತವನ್ನೂ ವ್ಯಾಪಿಸುತ್ತಲೂ, ಗೃಹಗಳನ್ನು ಕೆಡಹುತ್ತಲೂ, ಜಲಘೋಷಣೆಯನ್ನು ಮಾಡುತ್ತಲೂ, ದುಷ್ಟರನ್ನು ನಾಶ ಪಡಿಸೆಂದು ಆಜ್ಞೆಗೈದು, ಎಲೌ ನವಗ್ರಹಗಳಿರಾ :—

ಕಸ್ಮಾ ಪಂಚ ಸಹಸ್ರಾಂತೇ ಜಾಯತೇ ವರ್ಣಸಂಕರಃ॥

ಎಂಬ ರೀತಿಯಾಗಿ ಕಲಿಯುಗದ ಪ್ರಥಮ ಪಾದದೊಳು ಐದು ಸಾವಿರ ಸಂವತ್ಸರಗಳು ಕಳೆದ ಮೇಲೆ ವಿಕಾರಿ ಸಂವತ್ಸರ ಕಾರ್ತಿಕ ಬಹುಳ ತ್ರಯೋದಶಿಯಿಂದ ಮಾರ್ಗಶಿರ ಶುಕ್ಲ ಪ್ರಥಮಾ ಪರ್ಯಂತವೂ ಎಲೈ ಸೂರ್ಯ, ಚಂದ್ರ, ಅಂಗಾರಕ, ಬುಧ, ಗುರು, ರಾಹುಗಳೇ, ನೀವು ಆರು ಗ್ರಹಗಳು ಮಾತ್ರ ಕ್ರೂರ ಗ್ರಹಾಧಿಪತ್ಯದಿಂದ ವೃಶ್ಚಿಕರಾಶಿಯನ್ನು ಪ್ರವೇಶಿಸುವರಾಗಿ.

ವೃಶ್ಚಿಕ ರಾಶಿಯಲ್ಲಿ ಗ್ರಹದ್ವಯಗಳ ಯೋಗವು ಸಂಭವಿಸಿದರೆ ರಾಜ ಕ್ಷೋಭೆ ಮತ್ತು ಪ್ರಜಾ ಕ್ಷೋಭೆಯೂ, ಗ್ರಹತ್ರಯ ಯೋಗದಿಂದ ಕ್ಷೋಭೆ ಅನರ್ಥಗಳೂ, ಪ್ರಜಾನಾಶವೂ, ಗ್ರಹಪಂಚಕಗಳ ಯೋಗದಿಂದ ಸಮಸ್ತ ರಾಜರುಗಳ ನಾಶವೂ, ಅಷ್ಟಗ್ರಹಯೋಗದಿಂದ ಪ್ರಳಯವೂ ಸಂಭವಿಸುವುದರಿಂದ ನೀವು ಆ ಕಾಲದಲ್ಲಿ ಪ್ರಳಯಾವಕಾಶವನ್ನು ಕೊಡದೆ ಅಷ್ಟಗ್ರಹ ಯೋಗವು ವೃಶ್ಚಿಕರಾಶಿಯಲ್ಲಿದ್ದಾಗ ನೀವುಗಳು ನಿಮ್ಮ ನಿಮ್ಮ ಸಾಮರ್ಥ್ಯಗಳನ್ನು ತೋರಿಸಿ ಮತ್ತು ಮರಣಭಯ, ಜೋರಭಯ, ಅಗ್ನಿ, ರೋಗ ಮುಂತಾದ ಬಾಧೆಗಳನ್ನುಂಟುಮಾಡಿ, ರಕ್ತ ಪ್ರವಾಹವನ್ನುಸುರಿಸಿ, ದುರ್ಜನರನ್ನು ಧ್ವಂಸಮಾಡಿ, ಧರ್ಮಕ್ಕೆ ಸಹಾಯಮಾಡುವವರಾಗಿ, ಆ ಮಹಾ ಕ್ಷಾಮದಲ್ಲಿ ಗ್ರಹಣಗಳುಂಟಾಗಿ ಪೀಡೆಯಿಂದಲೂ, ಪಿಶಾಚಿಗಳಿಂದಲೂ, ಮಹಾ ರೋಗಗಳಿಂದಲೂ, ಧರ್ಮದೂಷಕರು ಹತರಾಗುವರು ಎಂದು ಹೇಳಿದನು.

ಇಂದ್ರನು ನಕ್ಷತ್ರಾಧಿ ದೇವತೆಗಳನ್ನು ನೋಡಿ ಉಲ್ಕಾಪಾತಗಳನ್ನೂ, ರಾತ್ರಿಕಾಲದಲ್ಲಿ ಧೂಮಕೇತುಗಳನ್ನೂ, ಕೆಂಡಗಳ ಮಳೆಯನ್ನೂ

Sri Vidyabharathi Book Centre, Singeri

CC-O. In Public Domain. Digitized by eGangotri

ಸುರಿಸಿ, ದುರುಳರು ಹಾ, ಹಾ ಎಂದು ತಪಿಸುವಂತೆ ಮಾಡಿರಿ. ಮಹಾತ್ಮರಾದ ಸಾಧುಗಳೂ, ಗುರುಗಳೂ, ದೇವತೆಗಳೂ ಇವರ ಕಣ್ಣೀರು ಭೂಮಿಯಲ್ಲಿ ಬಿದ್ದರೆ ಮಹಾಕ್ಷಾಮವೂ, ಮರಣವೂ, ದುಃಖವೂ ದೇಶಕ್ಕೆ ಉಂಟಾಗುವವು. ಆದುದರಿಂದ ಭೂಲೋಕದಲ್ಲಿ ಸಾಧುಗಳು ಕಣ್ಣೀರು ಹರಿಯುತ್ತಿರುವುದು, ಎಲೈ ಯಮನೆ, ನಿನ್ನ ಸೈನ್ಯವನ್ನು ಕರೆಸೆನ್ನಲು, ಯಮನಾಜ್ಞೆಯಂತೆ ರಾಜರೋಗ, ಉಪರೋಗ, ಮಹಾರೋಗ, ಈ ಇಪ್ಪತ್ತೇಳು ಕೋಟಿ ಸೈನ್ಯಗಳೊಡಗೂಡಿ ತಮ್ಮ ತಮ್ಮ ಪಾತ್ರಗಳನ್ನು ಹೊಗಳುತ್ತಾ ಆರ್ಭಟಿಸಲು, ದೇವೇಂದ್ರನು ನೋಡಿ, ಬೆರಗಾಗಿ ಇವುಗಳೆಲ್ಲವೂ ಹೊರಡಲು ನಿಮಿಷಮಾತ್ರದಲ್ಲಿ ಭೂ ಭಾರವು ತೊಲಗುವುದೆಂದು ನಿಶ್ಚಯಿಸಿ, ವೈದ್ಯಾಧಿಪತಿಯಾದ ಧನ್ವಂತರಿಯನ್ನು ನೋಡಿ, ಎಲೈ ಧನ್ವಂತರಿಯೇ, ನರರು ಮಾಡುವ ವೈದ್ಯಗಳು ನೆರವೇರದಂತೆ ಪರಮೌಷಧಗಳ ಸಾರವನ್ನು ಸೆಳೆಯುವನಾಗೆಂದು ಹೇಳಿ ಕಳುಹಲು ಅವನು ಇಂದ್ರನಾಜ್ಞೆಯನ್ನು ಪಡೆದು ಹೊರಟು ಹೋದನು. ಆಗ ಬ್ರಹ್ಮನು ಮಂತ್ರ ಗಳನ್ನು ನೋಡಿ, ನಿಮ್ಮ ಶಕ್ತಿಗಳೆಲ್ಲವನ್ನೂ ಸೆಳೆಯುವರಾಗಿ ಎನ್ನಲು, ಶ್ರೀ ಮಹಾವಿಷ್ಣುವು ವೈಷ್ಣವಜ್ವರ, ಸ್ಫೋಟಕ, ವಜ್ರಕೀಡಕ, ವೈಷ್ಣವ ಶೂಲೆ ಮೊದಲಾದ ರೋಗಗಳನ್ನು ಕಳುಹಲು, ಈಶ್ವರನು ತನ್ನ ಕ್ರೂರಿಗಳಾದ ಶಕ್ತಿಗಳನ್ನು ಕರೆಯಿಸೆಂದು ವೀರಭದ್ರನಿಗೆ ಆಜ್ಞಾಪಿಸಲು, ಆ ಶಕ್ತಿಗಳು ಬಂದು ಈಶ್ವರನನ್ನು ಸ್ತುತಿಸಿ ತಮ್ಮ ಪ್ರತಾಪಗಳನ್ನು ಹೇಳಿ ಈಶ್ವರನಿಂದಾಜ್ಞಾಪಿಸ ಲ್ಪಟ್ಟು ಪೂರ್ವದಿಕ್ಕಿನಿಂದ ಶೂಲಗಳು, ಮಹೇಶ್ವರಿ ಶಕ್ತಿಯು, ಪಶ್ಚಿಮ ದಿಕ್ಕಿನಿಂದ ಸ್ಫೋಟಕಾದಿಗಳು, ದಕ್ಷಿಣ ದಿಕ್ಕಿನಿಂದ ಜ್ವರ-ದಾಹ-ವಾಂತಿಗಳು, ಉತ್ತರ ದಿಕ್ಕಿನಿಂದ ಸನ್ನಿಪಾತ ರೋಗಗಳು ಬರಲು ಆಗ ಕ್ಷಾಮಡಾಮರಗಳು ತಲೆಯೆತ್ತಿದವು. ಕೆಂಡದ ಮಳೆಗಳಿಂದ ಜನರು ನಾಶವಾಗುತ್ತಲೂ, ಖಂಡ ಗಳೂ, ಧೂಮಕೇತು ಮಹೋತ್ಪಾದಕ ಮಳೆಗಳೂ, ಕ್ಷಾಮಕಾಲದಲ್ಲಿ ವಾಂತಿ ಭ್ರಾಂತಿ ರೋಗಗಳೂ, ದುರ್ಭಿಕ್ಷ ದುಃಸ್ವಪ್ನ ದುಃಖಗಳೂ, ಗರ್ಭರೋಗ ಮಹಾ ರೋಗಗಳೂ ವ್ಯಾಪಿಸಿದವು. ಆ ಸಮಯದಲ್ಲಿ ಶ್ರೀ ಮಹಾವಿಷ್ಣುವು ತನ್ನ ಮಹಿಮಾತಿಶಯಗಳನ್ನು ನಿಲ್ಲಿಸಿದನು. ಜನಗಳೆಲ್ಲರೂ ಮಹಾ ಪಾಪಿ ಗಳಾಗುವರು. ಆಗ ದುರ್ಗತಿಯು ಹೇಗಾಗುವುದೋ ಜನವು ಹೇಳಬೇಕೆಂದು

Sri Vidyabharathi Book Centre, Shringeri

CC-O. In Public Domain. Digitized by eGangotri

ಕೇಳಿದ ನಾರದನನ್ನು ಕುರಿತು ಬ್ರಹ್ಮನು ಹೇಳಿದ ಕಾಲಜ್ಞಾನವನ್ನು ಸೂತನು ಶೌನಕಾದಿ ಮುನಿಗಳಿಗಿಂತೆಂದನು :—

ಎಲ್ಲೈ ಶೌನಕಾದಿ ಮುನಿಗಳೇ ! ಯಮನು ಗೋವಧೆ ಮಾಡುವವರನ್ನು ಎಳೆತರಿಸಿ ಕೊರಳನ್ನು ಕೊಯಿಸುವನು. ಪರಸ್ತ್ರೀಯನ್ನು ಮೋಹಿಸಿದ ಕಡು ಪಾಪಿಗಳಿಗೆ ಕೆಂಪಾಗಿ ಕಾಯಿಸಿದ ಲೋಹಪ್ರತಿಮೆಯನ್ನು ತಬ್ಬಿಸುವನು. ಈ ರೀತಿ ಘೋರ ಪಾಪಿಗಳು ಬಾಧೆಯನ್ನನುಭವಿಸುತ್ತ ತಾವು ಸನ್ಮಾರ್ಗವನ್ನನುಸರಿಸದೆ ಹೋದುದರಿಂದ ನರಕಿಗಳಾದೆವೆಂದು ದುಃಖಿಸುವರು. ಇನ್ನು ಧರ್ಮವೇ ಸತ್ಯ, ಅದನ್ನು ಆಚರಿಸಬೇಕೆಂದು ಯೋಚಿಸುವರು. ಈ ಪ್ರಕಾರ ದುರ್ಮುಖಿ ಮೊದಲು ಕ್ಷಾಮಡಾಮರಗಳು ಅಭಿವೃದ್ಧಿಯಾಗಿ ಲೋಕದೊಳು ಮಳೆಗಳು ಕೈಗೂಡದೆ ಅಗ್ನಿಭಯಾದಿಗಳು ಹೆಚ್ಚಿ ಮಹಾರೋಗಗಳುಂಟಾಗಿ ಧಾನ್ಯಗಳು ದೊರಕದೆ ಕಳ್ಳತನ ಮೊದಲಾದವುಗಳು ಅಧಿಕವಾಗುವವು. ಅನೇಕ ಜನಗಳು ರೋಗದಿಂದ ನಾಶವಾಗುವರು. ಆದರೆ ದೇವತಾರಾಧನೆಗಳಿಂದ ಸ್ವಲ್ಪ ಉಪಶಮನವಾಗುವುದು.

ಎಲ್ಲೈ ನಾರದನೇ, ಈ ರೀತಿಯಾಗಿ ಭೂದೇವತೆಗೆ ಪರ್ವತಾದಿಗಳಿಗಿಂತಲೂ ಪಾಪಿಗಳ ಭಾರವೇ ಅಧಿಕವಾಗಿರುವುದರಿಂದ ಧರ್ಮನಿರತರಾಗಿ ದಯಾ ಶಾಂತಿಗಳಿಂದೊಡಗೂಡಿ ವೇದಾಂತ ವಿಚಾರವನ್ನು ಮಾಡಿ ಉತ್ತಮವಾದ ವರ್ಣಾಶ್ರಮ ಧರ್ಮಗಳನ್ನಾಚರಿಸುತ್ತಾ ಪಾಪಭೀತನಾಗಿ ಇರುವ ನರನಿಗೆ ಯಾವ ಭಯವೂ ಇಲ್ಲ. ಇನ್ನು ದೇವತಾಪೂಜೆ, ನವಗ್ರಹಪೂಜೆ ಮೊದಲಾದವುಗಳನ್ನು ಮಾಡುತ್ತಲೂ ಮಾಡಿಸುತ್ತಲೂ, ಧರ್ಮಪಾರಾಯಣನಾಗಿರುವವನಿಗೆ ನರಕ ಬಾಧೆಯು ಸಂಭವಿಸುವುದಿಲ್ಲವೆಂದು ಬ್ರಹ್ಮನು ನಾರದನಿಗೆ ಹೇಳಿದನೆಂದು ಸೂತನು ಶೌನಕಾದಿಗಳಿಗೆ ನಿರೂಪಿಸಿದನು.

॥ ಶ್ರೀ ಗುರುಭ್ಯೋನಮಃ ॥

ಶ್ರೀ ರುದ್ರಮುನಿಸ್ವಾಮಿಗಳ ಕಾಲಜ್ಞಾನವು

ಕಂದ ॥ ಶ್ರೀಮಾಧವನಂ ವಿಧಿಯಂ । ಕಾಮಾರಿಯು
ಶ್ರೀಯುಮಾಮುಂಬಿಕಾ ವಾಗ್ದೇವಿ । ದ್ವೈಮಾತುರ ಗೃಹ
Sri Vidyabharathi Book Centre, Sringeri
ಗಣಮುಂ ।
ಪ್ರೇಮದೆ ಮಣಿವೆರಗಿ ಭಜಿಪೆನೀಯಲಿ ಶುಭಮುಂ ॥

CC-O. In Public Domain. Digitized by eGangotri

ಆದಿ, ಅನಾದಿ, ಅನಂತರ, ಅರ್ಬುದ, ತಮಂದ, ಅಂಡಜ, ವಾರಿಜ, ಭಿನ್ನ, ಯುಕ್ತ, ಅಯುಕ್ತ, ಮಣಿರಣ, ಮಾನ್ಯರಣ, ವಿಶ್ವಾವಸು, ಅಲಂಕೃತ, ಕೃತ, ತ್ರೇತಾಯುಗ, ದ್ವಾಪರಯುಗ, ಕಲಿಯುಗ, ಕಲಿಯುಗದಲ್ಲಿ ಬಸವಣ್ಣನೇ ಭಕ್ತ, ಪ್ರಭುದೇವರೇ ಜಂಗಮ ಇಂತೆಂಬಭೇದವಿಲ್ಲ. ನೋಡಯ್ಯಾ ಭಕ್ತಿಯೇ ಪ್ರಬಲವನ್ನು ಮಾಡಬೇಕೆಂದು ಮಂಡಿಗೆ ಮಾದರಸರು ಮಾದಲಾಂಬಿಕೆ ಗರ್ಭದಲ್ಲಿ ಉದ್ಭವಿಸಿ ತಂಡ ತಂಡ ನಾಮಾಂಕಿತವಂ ಕೈಗೊಂಡು ಬಸವನ ಪ್ರಿಯ ಕೂಡಲ ಚನ್ನಸಂಗಯ್ಯನವರ ದಿವ್ಯಪಾದಕ್ಕೆರಗಿ ಪೇಳಿದ ಕಲಿಯುಗ ಪ್ರಮಾಣವೆಷ್ಟೆಂದರೆ ೪,೩೨,೦೦೦ ವರ್ಷಗಳು. ಶ್ರೀ ಬಸವರಾಜದೇವರು ಕಲ್ಯಾಣಕ್ಕೆ ಬಂದದ್ದು ಅಲ್ಲಿ ಕಲಿ ವರ್ಷಗಳು ಶ್ರೀ ಕೈಲಾಸಕ್ಕೆ ದಯಮಾಡಿಸಿದ್ದು ೪೯೭೨ನೇ ರಾಕ್ಷಸ ಸಂವತ್ಸರ ಫಾಲ್ಗುಣ ಶುದ್ಧ ೧೨ ಸೋಮವಾರ ೨೮ ಘಳಿಗೆಯ ಮೇಲೆ ಹೊರಟುಹೋದರು. ಅಡಸದ ಅಪ್ಪಣ್ಣನವರುಕಪ್ಪಡಿ ಸಂಗಮೇಶ್ವರನಲ್ಲಿ ಐಕ್ಯವಾದರು. ನಳನಾಮ ಸಂ॥ ವೈಶಾಖ ಬಹುಳ ೨ ಮಂಗಳವಾರ ರೋಹಿಣೀ ನಕ್ಷತ್ರದಲ್ಲ ೭೭೦ ಮಂದಿ ಅಮರ ಗಣಂಗಳು, ೬೦ ಮಂದಿ ಪುರಾತನರೂ, ೧೨,೦೦೦ ಜಂಗಮರೂ ಸಹಿತ ಬಿಜ್ಜಳನ ವಧೆಯನ್ನು ಮಾಡಿಸಿ ಉಳುವಿಗೆ ದಯಮಾಡಿಸಿದರು. ಹಿಂದಕ್ಕೆ ಹತ್ತು ಮುಂದಕ್ಕೆ ೧೧ ಸಂದ ಆನಂದ ನಾಮ ಸಂವತ್ಸರದಲ್ಲಿ ವೀರವಸಂತರಾಯನು ಹುಟ್ಟುವನು. ಸತ್ಯ, ನಿಮ್ಮಾಣೆ ನಿಮ್ಮ ಪುರಾತನರ ಪಾದದಾಣೆ.

ಪದ ॥ ಮುಂದಿಗಿನ್ನು ದಿನಮಾನ ಬಹು ಕೆಟ್ಟು ಬರುತಾವೆ ಕೇಳಿ ರಣ್ಣಾ ! ಬಂದಾನ ಗೋಪುರ, ಅಂದಾವನಳಿದಾರು ನೋಡಿರಣ್ಣಾ ! ಕಂದಾನ ದುರ್ಗವು ಕೈ ಸೆರೆಯಾದೀತು ಕೇಳಿರಣ್ಣಾ ! ಚಂದ್ರಾನ ಮೇಲಿನ್ನು ಚುಕ್ಕೆ ತಾನುಡೀತು ನೋಡಿರಣ್ಣಾ ! ಬಂದಾನು ಬೃಹಸ್ಪತಿ ಚಂದ್ರಾನ ರಥದಲ್ಲಿ ಕೇಳಿರಣ್ಣಾ ಎಂದು ಎಂದೆನ್ನಬೇಡಿ ಬಂದಾವು ದಿನಮಾನ ನೋಡಿರಣ್ಣಾ ! ಹಂದಿಮಾನವರಿಗೆ ತಿಳಿಯದು ಈ ಮಾತು ಕೇಳಿರಣ್ಣಾ ॥ ಸಂದಾವು ದಿನಗಾಳು ಕರಣಾರು ಬರುತ್ತಾರೋ ನೋಡಿರಣ್ಣಾ ! ಮಳೆಗಾಲ ಅಡಗ್ಯಾವು ಬೆಳೆಗಾಳು ನಿಂತಾವು ನೋಡಿರಣ್ಣಾ ! ಹಮ್ಮಿನ ಮನುಜರು ಮುಂದಿನ್ನು ಕೆಟ್ಟಾರು ನೋಡಿ ರಣ್ಣಾ ! ಘಳಿಗನವಾಡ್ಡಾನ ಪಾದಾವೆಂದು ನೋಡಿರಣ್ಣಾ ! ಗಡಿಬಿಡಿ ಮಾಡ್ಯಾರು ಒಬ್ಬಾರ ಗಂಟನ್ನು ಕೇಳಿರಣ್ಣಾ !

Sri Vidyaranya Book Centre

CC-O. In Public Domain. Digitized by eGangotri

ವಚನ॥ ಕೇಲಕನಾಮ ಸಂವತ್ಸರದಲ್ಲಿ ಕಿರೀಟ ರಾಮರಾಜನು ಬೇಲಿಗೆ ಬಿದ್ದಾನು. ಚಂದ್ರನ ಮೇಲೆ ಚುಕ್ಕೆ ಎಂದು ಹೂಡುತ್ತದೆಂದರೆ ವಿರೋಧಿ ನಾಮ ಸಂವತ್ಸರದ ಫಾಲ್ಗುಣಶುದ್ಧ ಭಾನುವಾರ ಚುಕ್ಕೆ ಕೂತದ್ದೇ ಕುರುಹು.

ಪದ ॥ ಮುಂದಿನ ಸೂಚನೆ ಹೆನ್ನಾಗಿ ಹೇಳುವೆ ಕೇಳಿರಣ್ಣಾ । ಭೂಮಿ ಮೇಲಣ ವೃಕ್ಷಗಳೆಲ್ಲವು ಮುರಿದಾವು ನೋಡಿರಣ್ಣಾ । ಸೀಮೆಗಳೆಲ್ಲವು ಹಾಳಾಗಿ ಹೋದಾವು ಕೇಳಿರಣ್ಣಾ । ರಾಮರ ಕಾಳಗವಾದೀತು ಮರ್ತ್ಯಾದಿ ನೋಡಿರಣ್ಣಾ ॥ ವ್ಯೋಮಕೇಶನ ಶಿವಶರಣಾರು ಬರುವಾಗ ಕೇಳಿರಣ್ಣಾ ! ಹೊನ್ನಿಗೆ ಒಮ್ಮಾಣ ಧ್ಯಾನವು ಮಾರೀತು ನೋಡಿರಣ್ಣಾ ! ಅನ್ನಾವ ಕಾಣದೆ ಮನೆಮನೆ ತಿರುಗ್ಯಾರು ಕೇಳಿರಣ್ಣಾ । ಆಕಾಶವದರೀತು ಭೂಕಾಂತೆ ನಡುಗ್ಯಾಳು ನೋಡಿರಣ್ಣಾ । ಕುಹುಕಾರು ಬಂದಾರು ಕಡೆಯಾಟವಾದೀತು ನೋಡಿರಣ್ಣಾ । ಲೋಕಕ್ಕೆ ಮಿಾರಿದ ಜೋರರು ಬರುತ್ತಾರೆ ಕೇಳಿರಣ್ಣಾ । ಮಾರಾಟ ನಡಿಯಾದು ಹೋರಾಟವಾದೀತು ನೋಡಿರಣ್ಣಾ । ಎಣಿಕೆಯ ಕೊಂಡಾರು ಯಳದಾಟವಾದೀತು ನೋಡಿರಣ್ಣಾ । ಧಣಿಗಳು ಬಂದಾರು ದಂತಾವ ಮುರಿದಾರು ಕೇಳಿರಣ್ಣಾ । ಎಚ್ಚಾರ ಸ್ತ್ರೀಯರು ಮೆಚ್ಚುಗಳು ಮಾಡ್ಯಾರು ನೋಡಿರಣ್ಣಾ । ಲೋಕವು ಹೆಚ್ಚಿತು ಕೆಚ್ಚಾಗಿ ಉದುರೀತು ಕೇಳಿರಣ್ಣಾ । ಆಚ್ಚಿವಿಚ್ಚಿ ಬೈಗಳು ಬೈದಾಡಿಕೊಂಬಾರು ಕೇಳಿರಣ್ಣಾ ॥

ವಚನ ॥ ಹೊನ್ನಿಗೆ ಒಮ್ಮಾಣ ಧಾನ್ಯ ಯಾವಾಗ ಮಾರುವುದೆಂದರೆ ಪರೀಧಾವಿ ಸಂವತ್ಸರದ ಚೈತ್ರ ಶುದ್ಧವೊದಲ್ಗೊಂಡು ಆರು ತಿಂಗಳು ಕಲ್ಯಾಣ ಪುರದಲ್ಲಿ ಕಚ್ಚಾ ಸೇರು ಮಾನದಲ್ಲಿ ೧೮ ದಿನದಿನ ಧಾನ್ಯವನ್ನು ಮಾರಿದ್ದೇ ಕುರುಹು ೪ ಕೋಟಿ ೪೨ ಲಕ್ಷ ೨೮ ಸಾವಿರ ಪ್ರಜೆಗಳು ಅನ್ನವನ್ನು ಕಾಣದೆ ಲಯವಾಗಬೇಕು. ಭೂಮಿಯು ಯಾವಾಗ ಗುಡುಗಬೇಕೆಂದರೆ ಪರೀಧಾವಿ ಸಂವತ್ಸರದ ಜ್ಯೇಷ್ಠ ಶುದ್ಧ ಮಂಗಳವಾರ ೧೧ ಘಳಿಗೆ ಪುಬ್ಬಾ ನಕ್ಷತ್ರದಲ್ಲಿ ಗುಡುಗಿದ್ದೇ ಕುರುಹು.

ಪದ ॥ ಎಮ್ಮಾಣೆ ಕಾವೇರಿ ಶ್ರೀರಂಗಪಟ್ಟಣದಲ್ಲಿ ಕೇಳಿರಣ್ಣಾ ।
ಚನ್ನವೀರ ವಸಂತಾನು ಹುಟ್ಯಾನು ನೋಡಿರಣ್ಣಾ ।

ವಚನ ॥ ಆನಂದನಾಮ ಸಂವತ್ಸರದ ಕಾರ್ತಿಕಶುದ್ಧ ಒಂದು ಶುಕ್ರವಾರ ಸ್ವಾತೀ ನಕ್ಷತ್ರದಲ್ಲಿ ೧೮ ಘಳಿಗೆಯ ಮೇಲೆ ಹುಟ್ಟುವನು. ಸತ್ಯ ದೇವಕಿ

Sri Vidyabharathi Book Centre, Sringeri

CC-O. In Public Domain. Digitized by eGangotri

ದೇವಿಯ ಗರ್ಭದಲ್ಲಿ ಹುಟ್ಟುವನು. ಕ್ಷತ್ರಿಯ ವಂಶದಲ್ಲಿ ವೀರವಸಂತರಾಯನು ಇರುವ ಕುರುಹು ಹೇಗೆಂದರೆ, ಡಮರುಗ ಹಸ್ತವೂ, ಊರ್ಧ್ವ ರೋಮವೂ, ಹೆಸರು ನರಗಳೂ ಹಣೆಯ ಮೇಲೆ ಎದ್ದಿರಬೇಕು. ಎಡಕುಂಟನ ಆಜ್ಞೆಯಲ್ಲಿ ೧೨ ವರುಷ ಇರಬೇಕು. ಆತನು ಹುಟ್ಟಿದ ಕುರುಹಿಗೆ ಬಿದುರು ಕೋಟೆಯಲ್ಲಿ ೯ ಲಕ್ಷ ದಂಡು ಮಡಿಯಬೇಕು. ಅದು ಯಾವಾಗ ಎಂದರೆ, ಆನಂದನಾಮ ಸಂವತ್ಸರದ ಫಾಲ್ಗುಣ ಶುದ್ಧ ೧೫ ದಿವಸ ರಕ್ತ ಕಾಲುವೆ ಹರಿಯಬೇಕು. ರಾಕ್ಷಸನಾಮ ಸಂವತ್ಸರದಲ್ಲಿ ಅರಸುಗಳು, ದೇಶಾಧಿಪತಿಗಳು ಅಳುವರು. ನಳ ನಾಮ ಸಂವತ್ಸರದಲ್ಲಿ ಮೂರುಗ್ರಹಣದ ಫಲವು ಜರುಗಬೇಕು. ಕಾಳೀಶ್ವರ ನಲ್ಲಿ ಹತ್ತು ಘಳಿಗೆ ರಾಜ್ಯ ಹೋದದ್ದೇ ಸಾಕ್ಷಿ. ಪಿಂಗಳನಾಮ ಸಂವತ್ಸರದ ಆಶ್ವೀಜ ಶುದ್ಧ ೧೫ ದಿನದಲ್ಲಿ ಆಕಾಶ ವದರಿದ್ದೇ ಸಾಕ್ಷಿ.

ಪದ ॥ ಅಮ್ಮಿನ ದುರ್ಗಕ್ಕೆ ಅಮ್ಮಾಜಿ ಬರುತಾಳೆ ಕೇಳಿರಣ್ಣಾ । ಗರ್ವದ ಪಾಪಿಗಳ ನಿರ್ಮೂಲ ಮಾಡ್ಯಾಳು ನೋಡಿರಣ್ಣಾ । ಅಮ್ಮ ಅಪ್ಪ ಗಳನ್ನು ಗುಮ್ಮಾಡಿ ಬಿಟ್ಯಾಳು ಕೇಳಿರಣ್ಣಾ । ತಮ್ಮ ಮಕ್ಕಳನ್ನು ಮಾರಿ ಕೊಂಡು ತಿಂದಾರು ನೋಡಿರಣ್ಣಾ । ಅಡ್ಡಗಲು ಐವತ್ತು ಗಾವುದ ಬೆಳದಾಳು ಕೇಳಿರಣ್ಣಾ ॥ ನೀಡುದಾಗಿ ಅರವತ್ತು ಗಾವುದ ಬೆಳೆದಾಳು ನೋಡಿರಣ್ಣಾ । ತಿರುಗಳ ಹೆಣಗಳ ಹಲ್ಲಲ್ಲೇ ಕಡಿದಾಳು ನೋಡಿರಣ್ಣಾ । ಮೂರು ಗಾವುದ ಉದ್ದ ನಾಲಿಗೆ ಚಾಚ್ಯಾಳು ನೋಡಿರಣ್ಣಾ ! ಮೂಗಿನ ವುಸಿರಿಗೆ ಮೂವತ್ತು ಗಾವುದ ಕೇಳಿರಣ್ಣಾ । ದಕ್ಷಿಣದಿಂದ ಉತ್ತರತನಕ ನಡೆದಾಳು ನೋಡಿರಣ್ಣಾ ॥

ವಚನ ॥ ಕಾಳಯುಕ್ತಿನಾಮ ಸಂವತ್ಸರದ ಆಷಾಢ ಶುದ್ಧ ೫ ಭಾನು ವಾರ ಪುಷ್ಯಮಾಸ ಮಖಾ ನಕ್ಷತ್ರದಲ್ಲಿ ಈಶಾನ್ಯ ದಿಕ್ಕಿನಿಂದ ಪಶ್ಚಿಮ ದಿಕ್ಕಿಗೆ ಹಾರ್ಯಾಳು. ನಾಲ್ಕು ದಿಕ್ಕಿನಿಂದ ನಾಲ್ಕು ಮೂರು ತಿಂಗಳು ಇದ್ದಾಳು. ೮೮ ಲಕ್ಷ ೫೫ ಸಾವಿರ ಪ್ರಜೆಗಳು ಲಯವಾಗಬೇಕು. ಹಂಪೆ ಸ್ಥಳದಲ್ಲಿ ೧೮ ಲಕ್ಷಮಾರ್ಬಲವು ಕೂಡಿತು. ಅಲ್ಲಿ ರಾಯರಿಗೆ ಜಗಳವಾದುವು. ಅಲ್ಲಿ ಯಾರ್ಯಾರು ಕೊಡಬೇಕೆಂದರೆ ಅಶ್ವಪತಿ, ನರಪತಿ, ಗಿರಂಗಿ ತಾಮ್ರದ ಮೋರೆಯವು ಕಿರೀಟ ರಾಮರಾಯನು ದಿಲ್ಲಿ ಸುಲ್ತಾನನು ಪಾವನ್ನ, ದಶನ್ನ ಬಾವನ್ನ ಗದ್ದವರು, ೭೭ ಮಂದಿ ಪಾಳೆಗಾರರೂ ಸಹ ಸೇರಬೇಕು. ಕಾಶೀ ಕವೆಯಿಂದ ಹರಿದ ಹೆಣ್ಣು ಮಗುವು ನವರಂಧ್ರದಲ್ಲಿ ಹೊಗೆ ಬರುವಳು. ಬಿದುರುಕೋಟೆ ಕಲ್ಲುಗಳು ಒಲೆಗುಂಡಿಗೆ ಸಾಲದೇ ಹೋಗುವುದು ವಿರುಪಾಕ್ಷ

Sri Vidyabharathi Book Centre, Bengaluru

CC-O. In Public Domain. Digitized by eGangotri

ದೇವರಬಳಿಯಲ್ಲಿ ೧೮ ಲಕ್ಷ ದಂಡು ಜಮಾ ಆಗುವುದೇ ಕುರುಹು, ಆಲ್ಲಿ ರಕ್ತದ ಕಾಲುವೆ ಹರಿಯಬೇಕು, ೧೨ ಖಂಡುಗದ ಬಳೆಗಳು ಒಡೆದೀತು ಇದು ಯಾವಾಗೆಂದರೆ, ಸಿದ್ಧಾರ್ಥಿನಾಮ ಸಂವತ್ಸರದ ಫಾಲ್ಗುಣ ಶುದ್ಧ ೩ ದಿವಸದಲ್ಲಿ ವಾಲೀಭಂಡಾರದ ದ್ರವ್ಯವನ್ನು ತೆಗೆಯಬೇಕೆಂದು ಬಂದಾರು ಚಾಳೇಂದ್ರ ಪರ್ವತದೊಳಗಿನಿಂದ ಜ್ಞಾನಗುಣಮಣಿ ಎಂಬ ಋಷೀಶ್ವರರು ಹೊರಟು ಬಂದು ಸಾಮಾನ್ಯರಿಗೆ ಸಾಧ್ಯವಾಗಲಾರದೆಂದು ಹೇಳಿದಾಗ್ಯೂ ಅವರ ಮಾತನ್ನು ಕೇಳದೆ ವಾಲೀಭಂಡಾರಕ್ಕೆ ಆಹುತಿ ಕೊಟ್ಟರು, ಅವರು ಅದೃಶ್ಯ ವಾಗಿ ಹೋಗುವರು.

ಪದ ॥ ಹನ್ನೆರಡು ಸಾವಿರ ಕನ್ನೆ ಹೆಣ್ಣಾಹುತಿ ಕೇಳಿರಣ್ಣಾ । ಮೂರು ಸಾವಿರದ ಬಸಿರು ಹೆಣ್ಣುಗಳಾಹುತಿ ನೋಡಿರಣ್ಣಾ । ಮೂರು ಲಕ್ಷ ಸಂಖ್ಯೆ ಕೋಣಗಳಾಹುತಿ ಕೇಳಿರಣ್ಣಾ । ಆರು ಲಕ್ಷ ಸಂಖ್ಯೆ ಕರುಗಳಾಹುತಿ ಕೇಳಿರಣ್ಣಾ ॥

ವಚನ ॥ ೩೭ ಖಂಡುಗ ಅನ್ನ ಆಹುತಿ, ಮೂರು ಖಂಡುಗ ಎಣ್ಣೇ ದೀಪವು, ೨೮ ಮಣ ಅರಶಿನವು, ೨೫ ಮೆಣಸು, ಎಷ್ಟು ಕೊಟ್ಟಾಗ್ಯೂ ಅದು ಸಾಧ್ಯವಾಗದು.

ಪದ ॥ಕನಕವರ್ಣವುಳ್ಳ ಸೂಕರ ಹೊರಟೀತು ಕೇಳಿರಣ್ಣಾ ಮನಸೀಗೆ ಬಂದಂತೆ ಮಾರ್ಬಲವು ಕೊಂದೀತು ನೋಡಿರಣ್ಣಾ । ಐದು ಗಜದ ಹಂದಿ ಕನ್ಯೆ ಹೆಣ್ಣಾದೀತು ನೋಡಿರಣ್ಣಾ । ಕಾದುತ ಮಡಿದಾರು ತಮತಮಗೆಂಬುತಾ ನೋಡಿರಣ್ಣಾ । ಎನಗೆ ತನಗೆ ಎಂದು ಗುದ್ದಾಟವಾದೀತು ಕೇಳಿರ್ಯಣ್ಣಾ । ಎದ್ದಾಳು ಪರ್ವತಗಿರಿಗೆ ಆ ಲಕ್ಷ್ಮಿಯು ಕೇಳಿರಣ್ಣಾ ॥

ವಚನ ॥ ಇವರು ಎಷ್ಟು ಹಿಂಬಲವಾಗಿ ಹೋದರೂ ಅಲ್ಲಿ ಅದೃಶ ವಾಗಿರುವಳು. ಅಲ್ಲಿಂದ ಶ್ರೀ ಮಲ್ಲಿಕಾರ್ಜುನನ ಗುಡಿಗೆ ಹೋಗುವಳು. ಮುಸಲ್ಮಾನರು ಬಿಡುವುದಿಲ್ಲವೆಂದು ಮೂರು ದಿವಸ ಮುತ್ತಿಗೆ ಹಾಕುವರು. ಶ್ರೀ ಮಲ್ಲಿಕಾರ್ಜುನ ದೇವರು ಬಂದು ಅವರ ಸ್ವಪ್ನದಲ್ಲಿ ಹೇಳಿದಾಗ್ಯೂ ಅವರು ಬಿಡುವುದಿಲ್ಲವೆಂದು ಹೇಳಲು ಆ ಲಕ್ಷ್ಮಿದೇವಿಯು ಪರ್ವತಗಿರಿಯನ್ನು ಬಿಟ್ಟು ಗೋಲ್ಕೊರಿಗೆ ಹೋಗಿ ಸೇರುವಳು. ಆದರ ದೆಸೆಯಿಂದ ಶ್ರೀ ಮಲ್ಲಿಕಾರ್ಜುನ ದೇವರನ್ನು ಕೆತ್ತು ಹಾಕಿದ ಬಳಿಕ :—

Sri Vidyabharathi Book Centre, Sringeri

CC-O. In Public Domain. Digitized by eGangotri

ಪದ ॥ ಊರಾನೆ ಮಾಡ್ಯಾರು ಸೂಳೆರೊಡಗೂಡ್ಯಾ ಕೇಳಿರಣ್ಣಾ ತೆರುಗಳು ಬೆಳೆದಾವು ಅರಣ್ಯವಾದೀತು ನೋಡಿರಣ್ಣಾ ॥

ವಚನ ॥ ಅಲ್ಲಿ ಮುಸಲ್ಮಾನರು ಮಸೀದಿ ಕಟ್ಟುವರು. ರೌದ್ರಿನಾಮ ಸಂವತ್ಸರದ ಜೈತ್ರ ಶುದ್ಧ ೨ ಭಾನುವಾರ ರೋಹಿಣೀ ನಕ್ಷತ್ರದಲ್ಲಿ ಆದದ್ದೇ ಕುರುಹು, ಚಿನ್ನದ ಅಮೂಲ್ಯವಾದ ಬಸವೇಶ್ವರನ ಕರ್ಣದಲ್ಲಿ ತೊಟ್ಟಿಲ ಬಳಿ ಒಂದೇ ದಿವಸದಲ್ಲಿ ಗೂಡಿಯ ಸುತ್ತಾ ಹಬ್ಬಿಕೊಂಡು ಅಲ್ಲಿ ಒಂದು ಅರ್ಭಟವಾದ ಕೂಗು ಹುಟ್ಟಿ ಅದರಿಂದ ಅರ್ಧ ದಂಡು ಲಯವಾದೀತು ಅಲ್ಲಿಂದ ವೆಂಕಟರಮಣನಲ್ಲಿಗೆ ಹೋದೀತು

ಪದ ॥ ಹೆಬ್ಬುಲಿ ಬೆಟ್ಟಾದಿ ಸುತ್ತಲು ತಿರುಗಾವು ಕೇಳಿರಣ್ಣಾ । ಹಬ್ಬೀತು ಕಾಡನ್ನು ತುಂಗಭದ್ರೆಯತನಕೆ ನೋಡಿರಣ್ಣಾ । ಒಬ್ಬರು ಶ್ರೀ ಮಲ್ಲಿಕಾರ್ಜುನನಿಗೆ ಹೋಗಾರು ಕೇಳಿರಣ್ಣಾ ತಬ್ಬಿಕೊಂಡು ಹೋಗುವುದಕ್ಕೂ ದಾರಿಲ್ಲ ನೋಡಿರಣ್ಣಾ ॥

ವಚನ ॥ ಸರ್ವಭೂಷಣನ ಬೆಟ್ಟದೊಳಗಿನಿಂದ ೭ ಗಜದುದ್ದ ಕರೀ ಹುಲಿ ಬಂದು ಸೇರಿತು, ಅಲ್ಲಿಂದ ವೆಂಕಟರಮಣ ತಿಮ್ಮಪ್ಪನ ನಾಭೀಕಮಲ ದಲ್ಲಿದ್ದ ರತ್ನವನ್ನು ತೆಗೆಯಬೇಕೆಂದು ಹೋದಾರು, ಆ ವೆಂಕಟೇಶನು ಕೊಲ್ಲಿ ಪಾಕಿ ಸೋಮನಾರಾಧ್ಯರಬಳಿಗೆ ಬಂದರು. ಆ ಮುಸಲಮಾನರು ಆ ಗಿರಿಯಂ ಏರಲಿಕ್ಕಾಗಿ ಬಂದಾರು. ರೌದ್ರಿನಾಮ ಸಂವತ್ಸರದ ಜ್ಯೇಷ್ಠ ಶುದ್ಧ ಗುರುವಾರ ಒಂಮ ಘಳಿಗೆಗೆ ಕೋಟಿ ದ್ರವ್ಯವು ಇದ್ದಲಾದೀತು, ಶಿಲಾಮೂರ್ತಿ ಅದೃಶ್ಯ ವಾದೀತು. ಬ್ರಹ್ಮದೇವರಟ್ಟಿ ದೀವಿಗೆ ಅದೃಶ್ಯವಾದೀತು. ಅಲ್ಲಿಂದ ಅಳಿಯ ಪುರಕ್ಕೆ ಬಂದಾರು. ಮಾತಂಗ ಪರ್ವತದ ಬಳಿಯಲ್ಲಿ ಮಸೀದಿ ಕಟ್ಟುವರು. ಆ ಪರ್ವತದ ಮೇಲೆ ಗಮ್ಮಟ ಅಳಿದಾರು. ಇದು ಯಾವಾಗೆಂದರೆ ರೌದ್ರಿ ನಾಮ ಸಂವತ್ಸರದ ಶ್ರಾವಣ ಬಹುಳ ೪ ಮಂಗಳವಾರ ರೋಹಿಣಿ ನಕ್ಷತ್ರದಲ್ಲಿ ೫ ಘಳಿಗೆಯ ಮೇಲೆ ವಿರೂಪಾಕ್ಷನ ಪೂಜೆಯು ನಿಂತು ಹೋದೀತು.

ಪದ ॥ ಜ್ಯೋತಿಷ್ಯ ಶಕುನವು ಸಟೆಯಾಗಿ ಹೋದಾವು ಕೇಳಿರಣ್ಣಾ ॥ ಜಾತುರ್ಯ ಹೆಚ್ಚೀತು ಕಲಿಯುಗದೊಳಗಿನ್ನು ನೋಡಿರಣ್ಣಾ ॥

ವಚನ ॥ ವಂಗಹರಿಣ, ಮುಂಗಸಿ, ಮೊಲ, ನಾಯಿ, ಬೆಕ್ಕು, ಇಲಿ ಈ ಆರು ಬಲಕ್ಕೆ ಒಂದರೆ ಶುಭವಾಗುವುದು. ಗಾಣಿಗರು. ಜೋಳಹಾರಗಿತ್ತಿ, ಒಂಟಿ ಬ್ರಾಹ್ಮಣನು, ಕಾಷ್ಠ ಹೊತ್ತವರು ಎದುರಾಗಿ ಶುಭವಾದೀತು.

Sri Vidyabharathi Book Centre, Sringeri

CC-O. In Public Domain. Digitized by eGangotri

ಜೋಡಿ ಮುತ್ತೈದೆಯರು ತುಂಬಿದಕೊಡವನ್ನು ಎತ್ತಿಕೊಂಡು ಬಂದರೆ ಲಕ್ಷಣವಾದೀತು. ಪಂಚಾಯತಿಗಳಲ್ಲಿಯೂ ನ್ಯಾಯ ಕೆಟ್ಟದಾಗುವುದು, ಕೆಟ್ಟದ್ದು ಒಳ್ಳೆಯದಾಗುವುದು.

ಪದ ॥ ಛತ್ರಿಯ ನೆರಳೀಲಿ ಎತ್ತೆಮ್ಮೆ ಮಾರುವರು ಕೇಳಿರಣ್ಣಾ । ಅತ್ತೆಗೆ ಸೊಸೆ ಬಂದು ಕಾಲಲ್ಲಿ ಒದ್ದಾಳು ನೋಡಿರಣ್ಣಾ । ನಿತ್ಯವೇನು ಜಪತಪಗಳು ಕೆಟ್ಟಾವು ಕೇಳಿರಣ್ಣಾ । ಕಲ್ಲುಕಲ್ಲಿಗೆ ಒಂದು ಕುದುರೆಗಳಾದವು ನೋಡಿರಣ್ಣಾ ಕಲ್ಯಾಣಪಟ್ಟಣ ಕಟುಕಕೇರ್ಯಾದೀತು ಕೇಳಿರಣ್ಣಾ । ವೊತ್ತಿಗೆ ಹೋದವರ ಕತ್ತೆಗಳಾಗುವರು ನೋಡಿರಣ್ಣಾ । ಉಳಿಗೆಡ್ಡಿಗೆ ಒಂದು ಹೆಣ್ಣು ಗಳಾದವು ಕೇಳಿರಣ್ಣಾ । ಒಳ್ಳೆ ಪುರುಷನ ನೋಡಿ ವಗತನ ಬಿಟ್ಟಾರು ನೋಡಿರಣ್ಣಾ । ಹಾರುವ ಹೆಣ್ಣು ಜಾರೇರು ಆದಾರು ನೋಡಿರಣ್ಣಾ । ತಂದೆಮಗನಿಗೆ ಒಬ್ಬ ಹೆಂಡತಿಯಾದಾಳು ಕೇಳಿರಣ್ಣಾ । ತಂದೆಯ ಕೊಂದು ಮಗ ರಾಜ್ಯವಾಳ್ವಾನು ನೋಡಿರಣ್ಣಾ । ಮುಂದಿನ್ನು ಮುಸಲಮಾನರಿಗೆ ಮಣಿಗ್ಯಾರು ಕೇಳಿರಣ್ಣಾ । ಒಂದಲ್ಲ ಗುರು ಶಿಷ್ಯ-ತಂದೆಮಕ್ಕಳ ನ್ಯಾಯ ನೋಡಿರಣ್ಣಾ । ಸಂದುಹೋದ ಮೂರು ಜಗವು ನುಂಗೀತು ಕೇಳಿರಣ್ಣಾ ।ಹೊಣೆಯಾದ ಜನರನ್ನು ಕೆಡಿಶ್ಯಾರು ಕೇಳಿರಣ್ಣಾ । ಗುರುಜನಗಳ ಕಂಡು ಅಣಕಿಸಿ ನಕ್ಯಾರು ನೋಡಿರಣ್ಣಾ । ಪುಂಡುಜನಗಳಲ್ಲಿ ಸ್ನೇಹಾವ ಬೆಳೆಸ್ಯಾರು ಕೇಳಿರಣ್ಣಾ । ತಿಳಿಯಾದೆ ಹೋಗುವರು ನರಕಕ್ಕೆ ಮುಂದಿನ್ನು ನೋಡಿರಣ್ಣಾ ॥

ವಚನ ॥ ಕಲ್ಯಾಣಪುರ ಪ್ರಾಂತ್ಯದಲ್ಲಿ ಇರುವ ಬಾಲಕ ಎಂಬ ಪಟ್ಟಣದೊಳಗೆ ಶಿವಭಕ್ತ ಬಸೆಟ್ಟಿ ಎಂಬುವನ ಮಗ ಲಿಂಗಸೆಟ್ಟಿ ಎಂಬುವನು ತಂದೆಯನ್ನು ಕೊಂದು ತಾಯಿಯ ಸಂಗಡ ಭೋಗವನ್ನು ಮಾಡುತ್ತ ಅಲ್ಲಿ ಈ ಮೇರೆ ಕಾರಬಾರ ಮಾಡಿದ್ದೀ ಕುರುಹು. ಇದು ಯಾವಾಗೆಂದರೆ, ದುರ್ಮುಖೀ ನಾಮ ಸಂವತ್ಸರದ ಶ್ರಾವಣ ಬಹುಳ ೫ ಸೋಮವಾರ ಆರಂಭ ಮಾಡಿಕೊಂಡು ಒಂದು ತೀಗಳು ಮತ್ತೊಂದು ತಿಂಗಳಲ್ಲಿ ನಡೆಯುವುದು. ಒಬ್ಬ ಪುರುಷನಿಗೆ ೯ ಮಂದಿ ಸ್ತ್ರೀಯರು ಬೆಂಬಲವಿದ್ದು ಹೋಗುವರು. ಅವರು ಬೇಸತ್ತು ಮರವನ್ನೇರಿಕೊಂಡರೂ ಬಿಡರು. ಈ ಮೇರೆ ಸ್ತ್ರೀಯರುಗಳ ಉಪದ್ರವವು ಅತಿಶಯವಾಗಿರುವುದು. ಆದ್ದರಿಂದ ಗಂಡಸರು ಮೂರು ದಿವಸದವರೆಗೆ ಆಡಗ್ಯಾರು ಎಲ್ಲಿ ನೋಡಿದರೂ ಕಾರ್ಗತ್ತಲೆ ಆದೀತು. ಇದು ಎಂದು

CC-O. Vidyabharathi Book Centre, Bangalore

CC-O. In Public Domain. Digitized by eGangotri

ಅಂದರೆ, ದುರ್ಮುಖಿ ನಾಮ ಸಂವತ್ಸರದ ಮಾರ್ಗಶಿರ ಬಹುಳ ೫ ಸೋಮವಾರ ಉತ್ತರಾಷಾಢ ನಕ್ಷತ್ರ ಆಗುವುದು. ಭೂತಗಳು ಘನವಾದೀತು. ಮಿಡತೇ ದಂಡು ಹೆಚ್ಚುವುದು. ರಾಯಚೂರು ಎಂಬ ಪಟ್ಟಣದ ಸುತ್ತಲೂ ಕತ್ತಲೆ ಕವಿದೀತು.

ಪದ ॥ ಮುಚ್ಚಿದ ಕದಗಳು ತೆರೆಯೂದೆ ಹೋದಿತು ನೋಡಿರಣ್ಣಾ । ಗುಡಗುಟ್ಟಿ ಸೀಮೆ ನಿರ್ಬಯಲಾಗಿ ಹೋಗುವುದು ನೋಡಿರಣ್ಣಾ । ಗಾಣದೊಳಗಿನ ಎಣ್ಣೆ ಗಾಣವೆ ನುಂಗೀತು ಕೇಳಿರಣ್ಣಾ । ಜನಗಳಿಗೆ ಅನ್ನಾವು ಕಾಣದೆ ಹೋದೀತು ನೋಡಿರಣ್ಣಾ । ರಾಣಿಯು ನುಂಗುವಳು ಮದುವ್ಯಾದ ಗಂಡನ್ನ ಕೇಳಿರಣ್ಣಾ ! ಮಾವಟಿಗನು ನುಂಗುವನು ಮದುಗಜದಾನೆಯ ನೋಡಿರಣ್ಣಾ । ರಾವುತ ಕುದುರೆಯ ಮುದದಿಂದ ನುಂಗುವನು ನೋಡಿರಣ್ಣಾ ॥

ವಚನ ॥ ಮದುವೆಗಳು ಮಾಡುವವರ ಬಟ್ಟೆಗಳಿಗೆ ೧೨ ಟಂಕೆಗೆ ೧ ಬಿಳಿಸೀ ಆಗುವುದು. ರೂಪಾಯಿಗೆ ಸವ್ವಾಸೇರು ಎಣ್ಣೆ ಮಾರುವುದು. ಇದು ಯಾವಾಗೆಂದರೆ ದುರ್ಮುಖಿನಾಮ ಸಂವತ್ಸರದ ಪುಷ್ಯಮಾಸದಲ್ಲಿ ಆಗಬೇಕು.

ಪದ ॥ ಏಳು ವರುಷದ ಹುಡುಗಿ ಒಂಭತ್ತು ಹಡೆದಾಳು ಕೇಳಿರಣ್ಣಾ । ಆದರೊಳಗೊಂದು ಪಿಂಡಾವು ಹುಟ್ಟೀತು ನೋಡಿರಣ್ಣಾ । ಪೇಳುತ ಬರುತಾದೆ ಪಿಂಡವುಂದಣ ಸುದ್ದಿ ಕೇಳಿರಣ್ಣ ॥

ವಚನ ॥ ಇದು ಯಾವಾಗೆಂದರೆ ದುರ್ಮುಖಿನಾಮ ಸಂವತ್ಸರದಲ್ಲಿ ಕಲ್ಯಾಣ ಪಟ್ಟಣದಾಚೆ ೩೬೦ ಗಾವುದ ದೂರದಲ್ಲಿ ಶ್ರೀರಾಮಪುರದ ಶಿವ ಬ್ರಾಹ್ಮಣನ ಹೊಟ್ಟೆಯಲ್ಲಿ ಒಂದು ಹೆಣ್ಣು ಕೂಸು ಹುಟ್ಟುವುದು. ಆಕೆ ಗಂಡ ಸಿಲ್ಲದೆ ಏಳು ವರ್ಷದಲ್ಲೇ ಗರ್ಭಿಣಿಯಾಗಿ ೯ ಮಕ್ಕಳನ್ನು ಹಡೆದಾಳು. ಅದರೊಳಗೆ ೮ ಮಕ್ಕಳು ಹೋದಾವು. ಒಂದು ಕೂಸು ಹಿಂದುಳಿದು ಮುಂದೆ ವೀರವಸಂತರಾಯನು ಚನ್ನಬಸವದೇವರು ಬರುವಂಥಾ ಕುರುಹನ್ನು ಹೇಳಿ ದುಂದುಭಿನಾಮ ಸಂವತ್ಸರದ ಶ್ರಾವಣದ ಬಹುಳ ೮ ಗುರುವಾರದಲ್ಲೇ ಅದು ಲಯವಾಗುವುದು, ಯಾವಾಗೆಂದರೆ, ದುಂದುಭಿನಾಮ ಸಂವತ್ಸರದ ಮಾಘ ಶುದ್ಧ ೧೫ ಮಂಗಳವಾರ ದಿವಸ ೩ ಘಳಿಗೆಗೆ ಸೂರ್ಯಗ್ರಹಣ ಹಿಡಿದು ೫ ಘಳಿಗೆಗೆ ಬಿಟ್ಟೀತು.

ಪದ ॥ ಮರಮಾನ್ಯದವರೆಲ್ಲ ಕೆಟ್ಟು ಭ್ರಷ್ಟರಾದವರು ಕೇಳಿರಣ್ಣ । ವಿರಕ್ತಮತದೊಳಗೆ ನಾರೀರು ಸೇದ್ಯಾರು ಕೇಳಿರಣ್ಣಾ । ಹೊಟ್ಟಾಲು ಕಟ್ಯಾರು ಜೋಯಿಂದು ಪಾಡುವರು ಕೇಳಿರಣ್ಣಾ । ತಂಗಿ ಒಡಗೂಡಿ ಸಂಗವ ಮಾಡ್ಯಾರ

Sri Vidyabharathi Book Centre, Singapura

CC-O. In Public Domain. Digitized by eGangotri

ಕೇಳಿರಣ್ಣಾ । ಜಂಗೂಳು ದೈವಕ್ಕೆ ಜೆನ್ನಾಗಿ ಎರಗ್ಯಾರು ಕೇಳಿರಣ್ಣಾ । ಲಿಂಗ ವುಳ್ಳವರಿನ್ನು ಹೊಲತೀಯ ಹೋದಾರು ಕೇಳಿರಣ್ಣಾ । ಜಂಗಮರಿಲ್ಲಾರು ಲಿಂಗಬಿಟ್ಟುಂಡಾರು ಕೇಳಿರಣ್ಣಾ ।ಲಿಂಗ ಕಟ್ಟಿದವರು ಮಾಂಸ ಸವಿದಾರು ಕೇಳಿ ರಣ್ಣಾ । ಹಂಗೀಸಿ ನೂರೊಂದು ಕುಲವು ಕೂಡುಂಡಾರು ಕೇಳಿರಣ್ಣಾ । ಅಣಕ ವಾಗಿ ಜರಿದು ಜಂಗಮ ಬಿಟ್ಟುಂಡಾರು ನೋಡಿರಣ್ಣಾ ।ಏಳು ಊರಿಗೆ ಒಂದು ಊರುಗಳಾದವು ಕೇಳಿರಣ್ಣಾ । ಜೋಳವ ಕಾಣದೆ ಮನೆಮನೆಗೆ ತಿರುಗ್ಯಾರು ನೋಡಿರಣ್ಣಾ । ಮೂರು ಗಾವುದಕ್ಕೊಂದು ಸಂತೆಯು ಕೂಡೀತು ಕೇಳಿರಣ್ಣಾ । ಹತ್ತು ಗಾವುದಕ್ಕೊಂದು ಪಟ್ಟಣವಾದೀತು ಕೇಳಿರಣ್ಣಾ । ದಕ್ಷಿಣದಿಂದ ಉತ್ತರ ತನಕ ಆದೀತು ನೋಡಿರಣ್ಣಾ ।ಉಳತೆಯ ಮೇಲೇರಿ ಉರುಳೀತು ಗುಂಡೊಂದು ಕೇಳಿರಣ್ಣಾ ॥ ತಿಳಿಯಾದೆ ಹೋದೀತು ಮರ್ತ್ಯಾದ ಜನರಿಗೆ ನೋಡಿರಣ್ಣಾ ॥

ವಚನ ॥ ಇದು ಯಾವಾಗೆಂದರೆ, ರುಧಿರೋದ್ಗಾರಿನಾಮ ಸಂವತ್ಸರದ ಆಶ್ವೀಜ ಶುದ್ಧ ೯ ಭಾನುವಾರ ಶ್ರವಣ ನಕ್ಷತ್ರದಲ್ಲಿ ೨೮ ಘಳಿಗೆಯ ಮೇಲೆ ಸಿಹಿ ವಿಷವಾಗುವುದು. ವಿಷ ಸಿಹಿಯಾಗುವುದು.

ಪದ ॥ ಕೊಟ್ಟಿದ್ದ ತಾನಾರು ಇಟ್ಟಿದ್ದು ಯಾರಾದು ಕೇಳಿರಣ್ಣಾ ಕೊಟ್ಟಿದ್ದು ಬಡ್ಡಿಗೆ ತಿರುಗಿ ಬಾರದದ ಕೇಳಿರಣ್ಣಾ । ಇಟ್ಟಿದ್ದು ನೆಲದೊಳಗೆ ಬೈಲಾಗಿ ಹೋಗುವುದು ನೋಡಿರಣ್ಣಾ । ನೀರಿಗೆ ಹೋದವರು ನೀರಿನಲ್ಲಿ ಮಡಿ ದಾರು ನೋಡಿರಣ್ಣಾ ಊರಿಗೆ ಹೋದವರು ಊರಲ್ಲಿ ಮಡಿದಾರು ನೋಡಿ ರಣ್ಣಾ ॥ ಪಟ್ಟು ಪಟ್ಟಾವಳಿ ಉಡವರ ಎಲ್ಲಾರು ನೋಡಿರಣ್ಣಾ । ತಟ್ಟನೆ ಮಡಿದಿನ್ನು ನೆಟ್ಟಾನೆ ಹೋದಾರು ನೋಡಿರಣ್ಣಾ । ಸೊನ್ನಾಲ ಪುರಿದೊಳಗೆ ಒಂಟಿ ಮುಖ ಹುಟ್ಟುವುದು ಕೇಳಿರಣ್ಣಾ ॥

ವಚನ॥ ಇದು ಸತ್ಯಸಿದ್ಧಾಂತವೆಂದು ರುದ್ರಮುನಿಸ್ವಾಮಿಗಳು ನಿರೂಪಿಸಿದ ಕಾಲಜ್ಞಾನವು. ಯುಕ್ತವಲ್ಲವೆಂದವರು ಶ್ವಾನಶೂಕರ ಜನ್ಮದಲ್ಲಿ ಹುಟ್ಟುವರು.

ಪದ ॥ ಯಾದವರಿಗಿಸುತ್ತ ಭೂತಗಳು ಬೆಜ್ಜಾವು ಕೇಳಿರಣ್ಣಾ ಸೀತಾಳ ವುರಿದೆದು ಪಾತಾಳಕಿಳಿದಾವು ನೋಡಿರಣ್ಣಾ । ಮಾತು ತಪ್ಪಿದರೆ ಬಸವಣ್ಣ ನಾಣೆಯು ಕೇಳಿರಣ್ಣಾ । ಸೀತಾಳವು ಭಿಮಾರಥಿಪುಷ್ಪ ಆಧಾರವು ನೋಡಿರಣ್ಣಾ

ವಚನ ॥ ಇದು ಯಾವಾಗೆಂದರೆ, ರುಧಿರೋದ್ಗಾರಿನಾಮ ಸಂವತ್ಸರದ ಆಶ್ವೀಜ ಬಹುಳ ೧೩ ಶನಿವಾರ ಧನಿಷ್ಠಾ ನಕ್ಷತ್ರದಲ್ಲಿ ೩ ಘಳಿಗೆಯ ಮೇಲೆ ಕೆಡದಮಳೆ ಮುಂತಾಗಿ ಗಾಳಿಯು ಸುತ್ತಲೂ ಸಂಚರಿಸುತ್ತಾ. ಇದು ಆಶ್ವೀಜ

Sri Vidyabharathi Book Centre, Sirsi

CC-O. In Public Domain. Digitized by eGangotri

ಬಹುಳ ೧೩ ಭಾನುವಾರ ಶತಭಿಷಾ ನಕ್ಷತ್ರದಲ್ಲಿ ೪ ಘಳಿಗೆಯ ಮೇಲೆ ಗುಂಡುಗಳು ತೆಲಿತು, ಬೆಂಡುಗಳು ಮುಳುಗೀತು, ಬೆಂಡು ಎಂಡು ಮುಳುಗ ಬೇಕೆಂದರೆ ಇದೇ ಆಶ್ವೀಜ ಬಹುಳ ೧೪ ಸೋಮವಾರ ಉತ್ತರಾಭಾದ್ರ ನಕ್ಷತ್ರದಲ್ಲಿ ೭ ಘಳಿಗೆ ಮೇಲೆ ಮಜ್ಜಿಗೆಯೊಳಗಿನ ಬೆಣ್ಣೆ ಮುಳುಗಬೇಕು. ಇದೇ ಆಶ್ವೀಜ ಬಹುಳ ೧೩ ಮಂಗಳವಾರ ಸಂಪೂರ್ಣವಾಗಿ ತೇಲಬೇಕು.

ಪದ॥ ದಕ್ಷಿಣ ದಿಕ್ಕಿನಲ್ಲಿ ಹುಟ್ಟಿದವರು ಎಡಕುಂಟ ಕೇಳಿರಣ್ಣಾ ।ಕಿತ್ತು ಹಾಕುವ ಪಾಣ್ಯ ಪಾಣ್ಯಗಳೆಲ್ಲವ ನೋಡಿರಣ್ಣಾ ।ಗುತ್ತೀಯ ಸೀಮೆಗೆ ಮಿತ್ತಾಗಿ ಬರುತ್ತಾನೆ ಕೇಳಿರಣ್ಣ । ಎತ್ತು ಮಾರುವಗೆ ಪಟ್ಟುವ ಕಟ್ಟುವ ನೋಡಿರಣ್ಣ ।

ವಚನ॥ ಶಿಖೇಂದ್ರ ಪಾಶ್ಚಾನ ಪಾಣ್ಯ ಎಂದು ಬೀಳಬೇಕೆಂದರೆ ರಕ್ತಾಕ್ಷಿ ನಾಮ ಸಂವತ್ಸರದ ಆಷಾಢ ಶುದ್ಧ ೫ ಸೋಮವಾರ ಪುಬ್ಬಾನಕ್ಷತ್ರದಲ್ಲಿ ॥೬॥ ಘಳಿಗೆ ಬಂದು ಬೀಜಾಪುರ ತಪ್ಪೆ ಏರುವನು, ಮೂರು ತಿಂಗಳು ರಾಜ್ಯವನ್ನು ಆಳುವನು. ಅಲ್ಲಿಗೆ ಕಿರೀಟ ರಾಮರಾಜನು ೯ ಲಕ್ಷ ದಂಡು ತೆಗೆದುಕೊಂಡು ಶಿಖೇಂದ್ರಪಾಶ್ಚನು ಆನೆ ಮೇಲೆ ಕುಳಿತುಕೊಂಡು ಹೊರಹೊರಟು ಬಂದು ಅರ್ಧ ದಂಡು ಲಯಮಾಡುವನು. ಆನೆಯೇರಿ ಬರುವ ಶಿಖೇಂದ್ರಪಾಶ್ಚನ ಮೇಲೆ ಕಿರೀಟ ರಾಮರಾಜನು ಚಂದ್ರಾಯುಧದಿಂದ ಅವನ ತಲೆಯನ್ನು ಹೊಡೆಯುವನು. ಈತನ ತಲೆಯು ಅಂತರಿಕ್ಷಕ್ಕೆ ಹಾರಿ ಭೋಯೆಂದು ಕೂಗುವುದು. ಕಿರೀಟ ರಾಮರಾಜನ ಸೈನ್ಯದಲ್ಲಿ ೯೦೦೦ ಜನಗಳು ಮಡಿದು ಹೋಗುವರು. ಇದು ಯಾವಾಗೆಂದರೆ, ಇದು ರಕ್ತಾಕ್ಷಿನಾಮಸಂವತ್ಸರ ಭಾದ್ರಪದ ಶುದ್ಧ ೮ ಶುಕ್ರವಾರ ೭ ಘಳಿಗೆ ಮೇಲೆ ಆತನ ತಲೆಯನ್ನು ಆನೆ ಅಂಬಾರಿಯೊಳಗೆ ಮೆರೆಸಿಕೊಳ್ಳುತ್ತಾ ಬಂದು ಸಿಂಹಾಸನದ ಮೇಲೆ ಇಟ್ಟು ಗೋರಿಯನ್ನು ಕಟ್ಟಿಸಿ, ೮೩ ಚಿನ್ನದ ಕಲಶಗಳನ್ನು ಇಟ್ಟು ಗುಮ್ಮಟವನ್ನು ಕಟ್ಟುವನು. ಆ ಗೋರಿಯ ಮೇಲೆ ಕೈಲಾಸದಿಂದ ಮಲ್ಲಿಗೆ ಹುವ್ವಿನ ಮಳಿಗೆರೆಯುವರು. ಕೊರಡು ಚಿಗುರೀತು ಬರಡು ಹಯವಾದೀತು. ಒಂದೇ ದೇವರಾಗಿಯೂ ಪೂಜೆಯನ್ನು ಕೊಳ್ಳುವುದು. ಕಲ್ಲುಬರುಗೆಯಲ್ಲಿ ದೇವರ ಪೂಜೆಯು ಮಧ್ಯಾಹ್ನ ನಿಂತುಹೋದೀತು. ಆ ಮೇಲೆ ಶಿಖೇಂದ್ರಪಾಶ್ಚನ ಗೋರಿಯ ಪೂಜೆನಿಂತೀತು. ಈ ಮರ್ಯಾದೆಯೆಲ್ಲ ಆದೀತು. ಆಮೇಲೆ ನಮ್ಮ ಗಣಂಗಳು ಹೊರಟುಬಂದಾರು. ಕ್ರೋಧನನಾಮ ಸಂವತ್ಸರದಲ್ಲಿ ಏನೇನು ಆಗುವುದೆಂದರೆ, ಲಿಂಗಯ್ಯನೊಳಗೆ ಕಣ್ಣುಗಳಿರುವವರು

Sri Vidyabharathi Book Centre, Sringeri

CC-O. In Public Domain. Digitized by eGangotri

ಬರುತ್ತಾರೆ, ತಲೆಯ ಮೇಲೆ ಕೋಡುಗಳು ಮೂಡಿದವರೂ, ಐದು ಮುಖ ಹತ್ತು ಭುಜಗಳು ಇದ್ದವರೂ ಸಹ ಬಂದಾರು. ಜಲಸ್ತಂಭನ, ದೂರದೃಷ್ಟಿ, ದೂರಶ್ರವಣ, ಈ ಪ್ರಕಾರದಿಂದ ಬಂದಾಗ್ಯೂ ಅವರನ್ನು ನಂಬಲಾಗದು, ಕ್ರೋಧನನಾಮ ಸಂವತ್ಸರದಲ್ಲಿ ಶ್ರೀ ಬಸವೇಶ್ವರದೇವರು ಬಂದಾರು, ವೀರ ವಸಂತರಾಯನು ಬರುತ್ತಾನೆಂದು ಕೇಳಿದಾಗ್ಯೂ ಒಂದು ಕಾಲಕ್ಕೂ ನಂಬ ಲಾಗದು. ಅವರು ಬರುವಂಥ ಸೂಚನೆ ಎಂದು ಬರುವುದೆಂದರೆ, ಅಕ್ಷಯನಾಮ ಸಂವತ್ಸರದ ಚೈತ್ರ ಶುದ್ಧ ೧ ಶುಕ್ರವಾರ ರೇವತಿ ನಕ್ಷತ್ರದಲ್ಲಿ ವಿರೂಪಾಕ್ಷೇಶ್ವ ರನು ಹೇಮಕೂಟದ ಮಠಕ್ಕೆ ಬಂದಾನು ಶ್ರೀವೈಷ್ಣವರು ೫೦೦ ಮಂದಿ ಸೊನ್ನಲಾಪುರದ ಸಿದ್ಧರಾಮೇಶ್ವರನ ಕೆರೆಯೊಳಗೆಬೀಳಿ, ಆನೆಯು ಹುಟ್ಟಿ, ಬಯಲಿಗೆ ಹೊರಟೀತು. ಆ ಆನೆಯನ್ನು ತೆಗೆದುಕೊಂಡು ಬಂದು ವೀರವಸಂತ ರಾಯನಿಗೆ ಕೊಟ್ಟಾರು. ಆ ವೀರವಸಂತರಾಯನು ಆನೆಯನ್ನು ತೆಗೆದು ಕೊಂಡು ಏನು ಮಾಡಬೇಕೆಂದು ಕೇಳುವನು.

ಪದ ॥ ವಿಭೂತಿಯಿಟ್ಟವರ ಹಣೆಗಾಳ ಕೆತ್ತಿ ಶ್ಯಾನು ಕೇಳಿರಣ್ಣ । ಪೂರೈಸಿ ಲಿಂಗಾದ ನಿರ್ಣಯವ ಕೇಳ್ಯಾರು ನೋಡಿರಣ್ಣ । ಹಾರುವರ ಜುಟ್ಟಿಗೆ ಹಗ್ಗವ ಕಟ್ಟಿಶ್ಯಾನು । ಕೇಳಿರಣ್ಣ । ಹೋರಾಟವಾದೀತು ಕಲಿಯುಗದೊಳಗಿನ್ನು ನೋಡಿರಣ್ಣಾ । ಸೂರ್ಯನ ಕೆಳಗಿನ್ನು ಸುರಚಾಪ ಮೂಡೀತು ಕೇಳಿರಣ್ಣ ॥

ವಚನ ॥ ಹಸರು ತೇಜಿಯನೇರಿ ತ್ರಿಜಗದೊಲ್ಲಭನಾದಂಥ ಚನ್ನ ಬಸವೇಶ್ವರ ದೇವರು ಸತ್ಯಬೀಜವನ್ನು ಹುಡುಕುತ್ತಾ ಬರುತ್ತಾರೆ. ಸಣ್ಣ ವಾಜಿಯುಳ್ಳವನಿಗೆ ಪಟ್ಟಣವನ್ನು ಕಟ್ಟುವರು. ಮೂಜಗವೂ ಕೆಟ್ಟು ಬಂದೀತು. ಶ್ರೀಚನ್ನಬಸವೇಶ್ವರದೇವರು ಬರುವುದಾವಾಗೆಂದರೆ ಅಕ್ಷಯನಾಮ ಸಂವತ್ಸರದ ಕಾರ್ತೀಕ ಶುದ್ಧ ಶುಕ್ರವಾರ ಸ್ವಾತೀ ನಕ್ಷತ್ರದಲ್ಲಿ ೧೮ ಘಳಿಗೆಯ ಮೇಲೆ ಹಸಿರು ತೇಜಿಯಮೇಲೆ ಕುಳಿತುಕೊಂಡು ೭೭೦ ಮಂದಿ ಅಮರಗಣಂ ಗಳು ೬೦ ಮಂದಿ ಪುರಾತನರನ್ನೂ, ೧೨ ಸಾವಿರ ಜಂಗಮರ ಸಮೂಹವನ್ನೂ ಹಿಂದಿಟ್ಟುಕೊಂಡು ಬರುವರು. ಅವರಿರುವ ರೂಪು ಎಂಥಾದ್ದೆಂದರೆ ಡಮರುಗ ಹಸ್ತದಲ್ಲಿ ಹಿಡಿದಿರಬೇಕು, ಕರೇ ಕಂಬಳಿಕಂತೆಯನ್ನೂ, ಕಾಮನ ಭಸ್ಮವನ್ನೂ, ಪರಿಪೂರ್ಣವಾದ ಪರಮ ರುದ್ರಾಕ್ಷಿಯನ್ನೂ, ಪರಶು, ಕೊಡಲಿಯ ಪೂಜೆ ಯನ್ನೂ, ಬೆರಳಿನಲ್ಲಿ ವೃಷಭನ ಮುದ್ರೆಯನ್ನೂ, ನಾಗಬೆತ್ತವನ್ನೂ ಕೈಯಲ್ಲಿ ಹಿಡಿದುಕೊಂಡು ಮುತ್ತಿನ ಹಾವಿಗೆ ಪಟ್ಟಿಕೊಂಡು ಪರಮಾತ್ಮನಾದ ಶ್ರೀಚನ್ನ

Sri Vidyabharathi Book Centre, Sringeri

CC-O. In Public Domain. Digitized by eGangotri

ಬಸವೇಶ್ವರ ದೇವರು ಬರುತ್ತಾ ವ್ಯಾಸರಲ್ಲಿ ಪೂಜೆಯನ್ನು ತೆಗೆದುಕೊಂಡು ಶ್ರೀ ನಂದೀಶ್ವರ ಬೆಟ್ಟಕ್ಕೆ ಬಂದು ನಂದೀಶ್ವರನ ದರ್ಶನ ಮಾಡಿಕೊಂಡು ೧೨,೦೦೦ ಜಂಗಮಾರ್ಚನೆ ಮಾಡಿಸಿ ಅಲ್ಲಿಂದ ವಿರೂಪಾಕ್ಷೇಶ್ವರನ ಬಳಿಗೆ ಬಂದು ಪಂಪಾ ಪುರವನ್ನು ಹೊಕ್ಕು ವೀರಪಸಂತರಾಯನ ಸಂಗಡ ಪ್ರಸಂಗವನ್ನು ಮಾಡು ವರು, ಶಿವಾಚಾರವನ್ನು ಕೂಡಿಸಿ ಎಷ್ಟು ಪರವನ್ನು ಏನು ಕಾರಣ ಮಾಡಿದಿ ರಿಂದು ಕೇಳುವಲ್ಲಿ, ಅದಕ್ಕೆ ವೀರವಸಂತರಾಯರ ಹೇಳುವುದೇನೆಂದರೆ, ವಿಷ್ಣು ಪಾದದಲ್ಲಿ ಗಂಗೆ ಹುಟ್ಟಿದಳೆಂದು ಹೇಳುವರು, ಇದಕ್ಕೆ ಶ್ರೀ ಚನ್ನಬಸವೇಶ್ವರ ದೇವರು ೨೦ ಯುಗಗಳಲ್ಲಿ ಮಾಯೆಯು ಹುಟ್ಟಿದನೆಂದು ಹೇಳುವರು. ಇದಕ್ಕೆ ವೀರವಸಂತರಾಯನು ಕಲಿಯುಗದಲ್ಲಿ ವಿಷ್ಣು ಹುಟ್ಟಿದನೆಂದು ಹೇಳುವರು. ೨೮ನೇ ಅವತಾರ ಈಶ್ವರನು ಹುಟ್ಟಿದನೆಂದು ಇವರು ಹೇಳುವರು. ಹೀಗೆ ಇವರು ವಾದಿಸುತ್ತಿರಲು, ಆಲ್ಲಿಗೆ ವಿರೂಪಾಕ್ಷದೇವರು ಜಂಗಮರೂಪಿನಿಂದ ಬಂದು ನೀವು ನೀವು ವಾದಿಸತಕ್ಕ ಕೆಲಸವಿಲ್ಲ. ಪಾತಾಳ ಗಂಗೆಯನ್ನು ಯಾರು ಬಯಸುತ್ತಾರೋ ಅವರೇ ಗುರುವಾಗಿ ಬನ್ನಿಯೆಂದು ಹೇಳುವರು. ಅಲ್ಲಿಂದ ವಿರೂಪಾಕ್ಷೇಶ್ವರನು ಸ್ಥಳವನ್ನು ಬಿಟ್ಟು ಪಾತಾಳ ಗಂಗೆಯ ಸಮೀಪಕ್ಕೆ ಹೋಗುವರು. ಇದು ಯಾವಾಗೆಂದರೆ,ಅಕ್ಷಯನಾಮ ಸಂವತ್ಸರದ ಮಾರ್ಗಶಿರ ಶುದ್ಧ ೧೦ ಸೋಮವಾರದ ರಾತ್ರಿ ೩ ಘಳಿಗೆಗೆ ಕದಳೀವನಾಂತರದಿಂದ ಪ್ರಭು ದೇವರು ಹೊರಟು ಬಂದು ಶ್ರೀ ಚನ್ನಬಸವರಾಜ ದೇವರಿಗೆ ಕ್ರಿಯಾಚಾರ ಪದ್ಧತಿ ಮುಗಿಸಿಕೊಟ್ಟು ಪಾತಾಳಗಂಗೆಯೊಳಗೆ ಚನ್ನಬಸವರಾಜ ದೇವರು ತಮ್ಮ ಪಾದವನ್ನು ಇಡಲಿಕ್ಕಾಗಿ ಮಾರ್ಗಶಿರ ಶುದ್ಧ ೧೧ ಮಂಗಳವಾರ ೩ ಘಳಿಗೆಯ ಮೇಲೆ ಕಿರಣವು ಬೀಳುವನು. ಪಾತಾಳ ಗಂಗೆಯಲ್ಲಿ ಚಂದ್ರ ಗುಪ್ತ ಮಹಾರಾಜನು ಬೈಲಿಗೆ ಬೀಳುವನು. ೭ ಗಜದ ಉದ್ದ ಕಲ್ಲಿನ ಮೇಲೆ ಶ್ರೀ ಚನ್ನಬಸವೇಶ್ವರದೇವರೂ, ಲೋಕಪಾವನಮೂರ್ತಿಯಾದ ಬಸವೇಶ್ವ ರನೂ ಬಂದು ಚಿಲುಮೆಯನ್ನು ತೆಗೆದು ಆ ಶೀತಲದಲ್ಲಿ ತಮ್ಮ ಪವಾಡವನ್ನು ತೊಳೆಯಲು ಅತನ ಶಾಪವು ನಿಶ್ಯಾಪವಾಗುವುದು. ಆಮೇಲೆ ವೀರವಸಂತ ರಾಯನಿಗೆ ಭಕ್ತಿ ಹುಟ್ಟುವುದು. ಸಾಷ್ಟಾಂಗ ನಮಸ್ಕಾರ ಮಾಡುವನು. ೫೦೦ ಮಂದಿ ವೈಷ್ಣವರು ಬಂದು ನಮಗೆ ಲಿಂಗಧಾರಣೆ ಮಾಡಬೇಕೆಂದು ಶ್ರೀ ಚನ್ನಬಸವದೇವರನ್ನು ಬೇಡಿಕೊಂಡರು, ಆಗ ವೀರವಸಂತರಾಯನಿಗೆ ಕಂಕಣ ಕಟ್ಟಿ, ಪಂಚಾಚಾರವನ್ನು ಕೂಡಿಸಿ, ಏಕಾಂತರಾಮಯ್ಯನವರು,

Sri Vidyabharathi Book Centre, Sringeri

CC-O. In Public Domain. Digitized by eGangotri

ಪಂಡಿತಾರಾಧ್ಯರು, ಲೋಕಪಾವನಮೂರ್ತಿ ಮರಳು ಶಂಕರದೇವರು, ಶ್ರೀಸಿದ್ಧ ನಂಜುಡೇಶ್ವರದೇವರು ಈ ಐದು ಮಂದಿ ಪಂಚಾಚಾರದವರನ್ನು ಕೂಡಿಸಿ ದೀಕ್ಷಾನುಗ್ರಹವನ್ನು ಮಾಡುವರು. ಮಾರ್ಗಶಿರ ಶುದ್ಧ ೧೫ ಶನಿವಾರ ರಾತ್ರಿ ೨೮ ಘಳಿಗೆಯ ಮೇಲೆ ಧಾರಣೆಯಾಗುವುದು. ೧೦೧ ಜಾತಿಯವರಿಗೆನ್ನು ಆ ಕಾಲದಲ್ಲಿ ಹೊನ್ನು ತೂಕವಿಭೂತಿ ಮಾರುವುದು. ೫ ವರಹಾಕ್ಕೆ ಒಂದು ಲಿಂಗ ಮಾರೀತು, ೨ ವರಹಾಕ್ಕೆ ಒಂದು ರುದ್ರಾಕ್ಷೆ ಮಾರುವುದು. ಈ ಪ್ರಕಾರವಾಗಿ ಅಲ್ಲಿಂದ ಕೂಗಿನ ಮಾರಯ್ಯನ ತಂದೆಗಳು ಹಟ್ಟಿ ಕೂಗುತ್ತಾ ಬಂದಾರು. ಅಲ್ಲಿಂದ ಭಕ್ತಿಯು ಪ್ರಬಲವಾಗುವುದು. ಶ್ರೀ ಚನ್ನಬಸವೇಶ್ವರದೇವರು ವೀರ ವಸಂತರಾಯನು ಸಹ ವೆಂಕಟಾಚಲಮೂರ್ತಿಯ ಬೆಟ್ಟಕ್ಕೆಬಂದು ಅಲ್ಲಿರುವ ವೆಂಕಟರಮಣಮೂರ್ತಿಗೆ ಲಿಂಗಧಾರಣೆಯನ್ನು ಸ್ಥಾಪ್ಯವನ್ನು ಮಾಡಿ ಲಿಂಗ ಧಾರಣೆ ಮಾಡುವರು. ಅಲ್ಲಿ ೮೦ ಕೋಟಿ ದ್ರವ್ಯವನ್ನು ತೆಗೆದುಕೊಂಡು ಹಂಪೆಯ ಸ್ಥಳಕ್ಕೆ ಹೊರಟು ಬಂದು ಹಂಪೆಯ ಸುತ್ತಾ ಕೋಟೆಯನ್ನು ಕಟ್ಟಿಸುವರು. ಅಲ್ಲಿ ಮಾತಂಗ ಪರ್ವತವನ್ನು ಕಟ್ಟಿಸಿ ೨೫,೦೦೦ ಜಂಗಮಾರ್ಚನೆ ಮಾಡಿಸುವರು. ವಿರೂಪಾಕ್ಷ ದೇವರ ಪೂಜೆ ಮಾಡಿಸಿ ಕಲ್ಲು ತೇರು ಎಳೆಸುವರು. ಶ್ರೀ ಚನ್ನಬಸವರಾಜ ದೇವರು ಒಂದು ಹಸ್ತದಿಂದಲೂ, ವೀರ ವಸಂತರಾಯನು ಒಂದು ಹಸ್ತದಿಂದಲೂ ಲೋಕಪಾವನಮೂರ್ತಿಯನ್ನು ಮುಹೂರ್ತ ಮಾಡಿಸುವರು ರಥೋತ್ಸವವನ್ನು ಮಾಡಿಸಿ, ವಾಲಿಭಂಡಾರಕ್ಕೆ ಬಂದು ಭಂಡಾರದೊಳಗಿನ ಭಾಗ್ಯವನ್ನೆಲ್ಲ ತೆಗೆದುಕೊಂಡಾರು. ಭಂಡಾರದೊಳಗಿನಿಂದ ಲಕ್ಷ್ಮೀದೇವಿಯು ಹೊರಟು ಬಂದು ನಿಮ್ಮ ದ್ರವ್ಯ ನಿಮಗೆ ಮುಟ್ಟಿತೆಂದು ಹೇಳಿ ಒಪ್ಪಿಸಿ ಅದೃಶ್ಯಳಾಗುವಳು. ಕಲ್ಲು ಕೋಳಿ ಕೂಗೀತು. ಮಲ್ಲನು ಬಂದು ಜೂರಿ ತಾಕುವನು. ಸುತ್ತು ಮೂರು ಗಾವುದ ಸುದ್ದಿ ಕೇಳ್ಯಾರು. ಅಂದಲ್ಲಿ ಕೊಲ್ಲುಪಾಕಿ ಸೋಮನಾರಾಧ್ಯರ ಬಳಿಗೆ ಬಂದಾರು. ಪುಷ್ಯ ಶುದ್ಧ ೫ರಲ್ಲಿಳಂಂ ಜಂಗಮಾರ್ಚನೆ ಮಾಡ್ಯಾರು. ಅಲ್ಲಿಂದ ಕಲ್ಯಾಣಕ್ಕೆ ಬರುವುದರೊಳಗೆ ಏನು ಆಗುವುದೆಂದರೆ ಭುವನವೇ ಭೂಕೈಲಾಸವೆನಿಸುವುದು. ಎಲ್ಲಿ ನೋಡಿದರಲ್ಲಿ ಭೋಗಭಾಗ್ಯಾನಂದವಾಯಿತು. ಪ್ರಭವನಾಮ ಸಂವತ್ಸರದಲ್ಲಿ ಬಾಲಕಿಗೆ ಬಂದಾರು. ಅಲ್ಲಿ ಬಲಿಕೇಶ್ವರನ ದರ್ಶನಮಾಡಿಕೊಂಡು ೩ ಕೋಟಿ ಲಿಂಗ ಬಿಲ್ವಲಿಂಗ ಬಂದಾವು. ಇಂಬಿಟ್ಟನನ್ನು ಪೂಜೆಯಂ ಮಾಡಿಸಿ,

Sri Vidyabharathi Book Centre, Sringeri

CC-O. In Public Domain. Digitized by eGangotri

೬೯ಸಾವಿರ ಜಂಗಮಾರ್ಚನೆಯನ್ನು ಮಾಡಿಕೊಂಡು ಕಲ್ಯಾಣಕ್ಕೆ ಬಂದಾರು. ಗಣಂಗಳನ್ನೆಲ್ಲಾ ಕರೆಯುಲಿಕ್ಕೆ ದೊರೆ, ಗೌಡ, ಮಂತ್ರಿ, ಪ್ರಜೆ, ಪರಿಪಾಲಕ ರೆಲ್ಲರಂ ಕರೆಸಿ ಈ ಪ್ರಕಾರ ಕಳುಹುತ್ತಾ ಬಂದಾರು. ಪರಿಪರಿಯ ವಾದ್ಯದಿಂದ ಬೂರುಗ, ತಮಟೆ, ಈಟಿ, ನಿಸ್ಸಾಳ, ಮೃದಂಗ, ಭಜಂತ್ರಿ ಸುರವನೈಶ್ವರ್ಯ ದಿಂದ ಕುಂಡಲೇಶ್ವರನ ದರ್ಶನವಂ ತೆಗೆದುಕೊಂಡು ಈ ಸಭಾಮಂಟಪಕ್ಕೆ ಬಂದಾರು. ಲೋಕಪಾವನ ಮೂರ್ತಿ ಚನ್ನಬಸವರಾಜದೇವರು, ವೀರವಸಂತ ರಾಯನು, ಅಕ್ಕ ನಾಗಲಾಂಬಿಕೆಯು ಬಂದಾರು. ಅಕ್ಕ ನಾಗಲಾಂಬಿಕೆಯ ದರ್ಶನವನ್ನು ತೆಗೆದುಕೊಂಡು ನೋಟ ಹರುಷದಿಂದ ನೋಡ್ಯಾರು. ನರದೇಹ ವಾದಾಳು, ಸಮಸ್ತ ಗಣಂಗಳೂ ಕೂಡಿ ಬಿಜ್ಜಳನ ಅರಮನೆಗೆ ಬಂದಾರು. ವಾಪುರಿ ಪೇಟಿಗೆಕವಲು ಕೊಟ್ಟಾರು. ಸುತ್ತ ಕೋಟೆಗಳು ಕಟ್ಟಿಸ್ಯಾರು. ೬ ಗಜ ಭೂಮಿ ಬಿಚ್ಚಿ ಪ್ರಭು ಸಿಂಹಾಸನ ಹೊರಟೀತು. ಆಮೇಲೆ ಪ್ರಭವನಾಮ ಸಂವತ್ಸರದ ಚೈತ್ರ ಶುದ್ಧ ೧ಸೋಮವಾರ ರೇವತಿ ನಕ್ಷತ್ರದಲ್ಲಿ ೧೨ ಘಳಿಗೆಯ ಮೇಲೆ ಮುಹೂರ್ತ ಮಾಡಿಸ್ಯಾರು. ಮಾಡುವ ಸಮಯದಲ್ಲಿ ತ್ರಿಪುರಾಂತಕದ ಕೆರೆ ನೀರು ಕಪ್ಪಾಗಿದೆ, ಕಲ್ಲುತೇರು ಬದಲಾದೀತು. ತ್ರಿಪುರಾಂತಕದಕೆರೆಮೇಗೆ ಲಿಪಿಗಳನ್ನು ಓದುವರು. ಕೆರೆಮಲ್ಲಿಗೆ ವುಷ್ಪವಾದಾವು. ಉಮಾಪುರದ ಗಣೇಶನನ್ನು ಕಿತ್ತುಬಿಟ್ಯಾರು. ೩ ಕೋಟಿ ದ್ರವ್ಯ ತೆಗೆದುಕೊಂಡು ವೀರ ವಸಂತರಾಯನಿಗೆ ಹೊನ್ನಿನ ಅಭಿಷೇಕವನ್ನು ಮಾಡಿಸ್ಯಾರು. ಬಿದನೂರು ಕೋಟೆಯೊಳಗೆ ವೀರ ಸಂಗಪ್ಪನ ಗದ್ದಿಗೆ ಸಮಿಾಪಕ್ಕೆ ಬಂದು ಕೋಟಿ ದ್ರವ್ಯ ವನ್ನು ತೆಗೆದಾರು. ಸಮಸ್ತ ದ್ರವ್ಯವಂ ಖರ್ಚುಮಾಡಿ ಕಲ್ಯಾಣಪಟ್ಟಣ ಕಟ್ಟಿ ಸುವರು ದೆಸೆದೆಸೆಗೆ ೧೧ ಯೋಜನ ಪ್ರಮಾಣ. ಅದಕ್ಕೆ ೩೬೦ ಬಾಗಿಲು, ೭೭೦ ದಿಡ್ಡಿಗಳು, ೯೬ ಕೋಟೆದಿಡ್ಡಿ, ನವರತ್ನ ಕೆತ್ತಿಸಿದ ಕದಗಳು, ಸೂರ್ಯನ ಬೀದಿ, ಚಂದ್ರನ ಬೀದಿ, ಚನ್ನಬಸವರಾಜದೇವರ ಮಠದ ವಿಸ್ತಾರ ಏನೆಂದರೆ, ದೆಸೆದೆಸೆಗೆ ನಾಲ್ಕು ಯೋಜನದ ಪ್ರಮಾಣ ಅದರ ಬಾಗಿಲು ವಿಭೂತಿ ಕದಗಳು, ವಿಭೂತಿ ಮುಸುಕು, ವಿಭೂತಿ ಹೊಸಲುಗಳು, ಸಮಸ್ತವೂ ವಿಭೂತಿಮಯವು. ಮತ್ತೊಂದು ಬಾಗಿಲೆಲ್ಲಾ ರುದ್ರಾಕ್ಷಿಮಯ, ರುದ್ರಾಕ್ಷಿ ಮುಸುಕು, ರುದ್ರಾಕ್ಷಿ ಸೂಸಕ ಅಲ್ಲಿಯ ಪ್ರಮಾಣವು ಸಂಖ್ಯಾತೀತವು. ಮಿಕ್ಕ ೩೬ ಬಾಗಿಲು ವಜ್ರ ವೈಡೂರ್ಯ ಮೊದಲಾದ ನವರತ್ನ ಕೆತ್ತಿಸಿದ ಕದಗಳು. ಅಲ್ಲಿ

Sri Vidyabharathi Book Centre, Sirigere

CC-O. In Public Domain. Digitized by eGangotri

ಶಿವನ ಅಪೇಕ್ಷೆಯಿಲ್ಲದೆ ಇರುವವರುಂಟು. ಅಚಪ್ಪಸಾದಿಗಳು ಮಠಗಳ ೧,೬೦೦ ಚಿಲುಮೆ-ಅಗ್ಗಣಿ ಮರ ೧,೫೦೦ ಗುರುಲಿಂಗ ಜಂಗಮಕ್ಕೆ ತನುಮನ ಧನಗಳು ಅರ್ಪಿಸುವ ಮರಗಳು ೧ ಲಕ್ಷ, ಇಂತಪ್ಪ ಕಲ್ಯಾಣಪಟ್ಟಣವನ್ನು ಮಾಡಿ ೧೨,೦೦೦ ವರುಷಗಳು ಅವರ ವಂಶದವರು ಆಳಬೇಕು, ಚನ್ನ ಬಸವರಾಜದೇವರು ಇರುವುದು ೭೬ ವರುಷ. ವೀರವಸಂತರಾಯನಿರುವುದು ೬೦ ವರುಷ. ಆ ಮೇಲೆ ಬೈಲಿಗೆ ಬೈಲು ಆದಾರು, ಪ್ರಭವನಾಮಸಂವತ್ಸರದಲ್ಲಿ ಬಾರದಿದ್ದರೆ ಪ್ರಮಥರಾಣೆ, ಲಕ್ಷದ ಮೇಲೆ ತೊಂಭತ್ತಾರು ಸಾವಿರ ಗಣಂಗಳ ಪಾದದಾಣೆ. ಈ ಮಾತು ಸಟೆಯೆಂದವರಿಗೆ ಶ್ವಾನಸೂಕರ ಜನ್ಮ ತಪ್ಪದು, ಚಂದ್ರ ಸೂರ್ಯರಿರುವ ತನಕ ನರಕ ತಪ್ಪದು. ಇದು ಸಿದ್ಧಾಂತವೆಂದು ರುದ್ರಮುನಿಸ್ವಾಮಿಗಳು ನಿರೂಪಿಸಿದ ಕಾಲಜ್ಞಾನವು. ಉದಯಕಾಲ, ಮಧ್ಯಾಹ್ನ, ಸಾಯಂಕಾಲದಲ್ಲಿ ಪಠಿಸಿದವರಿಗೆ ಧನಧಾನ್ಯ, ಕನಕ, ವಸ್ತ್ರ. ವಾಹನ, ಛತ್ರ, ಚಾಮರ, ಅಂದಣ ಮೊದಲಾದ ಐಶ್ವರ್ಯವೂ, ಬ್ರಾಹ್ಮಣರು ನಿಂದೆಮಾಡಿದರೆ ಕಾಶಿಯಲ್ಲಿ ಗೋಹತ್ಯ ಮಾಡಿದ ಫಲವೂ, ಶಿವಭಕ್ತರು ನಿಂದೆಮಾಡಿದರೆ ಪರ್ವತದಲ್ಲಿ ಲಿಂಗದ್ರೋಹ ಮಾಡಿದ ದೋಷಕ್ಕೆ ಗುರಿಯಾಗುವರು. ಇದು ಸಿದ್ಧಾಂತವೆಂದು ರುದ್ರಮುನಿಗಳು ನಿರೂಪಿಸಿದ ಕಾಲಜ್ಞಾನವು.

ರುದ್ರಮುನಿ ಕಾಲಜ್ಞಾನ ಸಮಾಪ್ತವಾದುದು.

—೦—

ಯಮ್ಮಯ್ಯ ಬಸಪಣ್ಣನವರ ಕಾಲಜ್ಞಾನವು

ಕುಂಭೀಣಿ ಕದಗಿತು ಜಂಬೂಕ ಹೊರಟೀತು ಹುಯ್ಯಲೆ ಡಂಗೂರವ ॥
ಜಂಬೂಕ ಕೋಡಗ ಜಗಳತಾವಾಡ್ಯವು ಹುಯ್ಯಲೆ ಡಂಗೂರವ ॥ ಹೊಗೆಬಂಡಿ
ಬಂದು ಜಗವಂದ ಆದೀತು ! ನಗೆಗೇಡು ಆದೀತು ಶ್ರೀರಂಗಪಟ್ಟಣ ॥ಹು !
ಬಲವುಳ್ಳ ಮಂತ್ರಿ ಜೆಲುವು ತಾ ಕೆಟ್ಟೀತು । ಮನ್ಮಥಸದಾಂಕ ವೀರವಸಂತನು
ಬರುವಾ ॥ ಹು.... ॥ಕಾನಕಾನರೆಲ್ಲ ದಕ್ಷಿಣಕ್ಕೆ ನಡೆದಾರು ॥ ಹು ॥ ಕಾನನಕ್ಕೆ
ನಡೆದಂತೆ ದಕ್ಷಿಣಭಾಗದಿ ॥ ಹು ॥ ಶೀರ್ಯಾದರೋಗಾನ ಶಿರವನ್ನು ಕುಯಿದಾರು
॥ ಹು ॥ ತೋರಣ ಕಟ್ಯಾರು ಬಾಗಿಲಿಗೆ ಅವನನ್ನು ॥ ಹು ॥ ಹಾರೋರ
ಕೇರೀಲಿ ಹಾದರವು ಹೆಚ್ಚೀತು । ಜಾರೇರು ಹೆಜ್ಜಾರು ಜಗವೆಲ್ಲ ಕಟ್ಟೀತು ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಹು॥ ತುರುಕರ ದೆಸೆಯಿಂದ ಕಿರಿಕಿರಿ ಆದೀತು ॥ಅರ್ಥವುಳ್ಳವರೆಲ್ಲ ನೆತ್ತಿಯ ನೊಡೆದಾರು ॥ಹು॥ ಕಾಲನ ಬಾಧೆಯ ಮರಿತಾರು ತುರುಕಾರು ॥ಹು॥ ವಿಜಯ ನಗರದಲ್ಲಿ ಗಜಬಿಜಿಯಾದೀತು ॥ಹು॥ ಮಧ್ಯ ಕಲ್ಯಾಣ ಕೈಸೆರೆ ಹಿಡಿದಾರು ॥ ಹು ॥ ಜಡಗಾಲ ದೇಶದ ಹುಡುಗ ತಾ ಬಂದಾನು ॥ಹು॥ ಮಡದಿ ಮಕ್ಕಳು ಸಹಾಯವಾ ಬಂದಾರು॥ಹು॥ ಮುನ್ನೂರು ಗಾವುದವನ್ನು ತಾನೇರ್ಯಾನು ॥ಹು॥ ಕನ್ನಡ ದೇಶಕ್ಕೆ ಕಡೆನೊದಲಿಲ್ಲದೆ ಆನ್ಯಾಯ ಹೆಚ್ಚೀತು ಆತನ ದೆಸೆಯಿಂದ ॥ಹು॥ ಹನ್ನೆರಡು ವರುಷ ಕಡೆಗಾಲ ಅವನಿಗೆ ರಾಮೇಶ್ವರದಲ್ಲಿ ರಕ್ತಾವತೊಳೆದಾರು ॥ಹು॥ ರಾಮಲಿಂಗನ ಪೂಜೆ ತಾಮಸ-ವಳದಾರು ॥ಹು॥ ಅಲ್ಲಿ ಕತ್ತಲು ಕವಿದೀತು ಕರ್ಮಾವು ಹೆಚ್ಚೀತು ॥ ಅಲ್ಲಿ ಇದ್ದ ವರೆಲ್ಲ ನೆತ್ತಿಲನಯನೊಡೆದಾರು ॥ಹು॥ ಕಾಮುಬಾಧೆಯನರಿತಾರು ತುರುಕಾರು॥ ಬಿದಿರಪ್ಪಾನಹಳ್ಳಿ ಪಾಣ್ಯವ ಮಾಡ್ಯಾರು ॥ಹು॥ ರಾಯರ ಹೆಸರನು ಅರಿಯನು ಆತನೂ ಆಗಾಗ ಹುಸ್ಸೇನಿ ಛಲವು ತಾ ಕೆಟ್ಟೀತು ॥ಹು॥ ರಾಮರ ದೆಶೆಯಿಂದ ಶೀಮೆಯ ಬಿಟ್ಟಾರು ॥ಹು॥ ಸುರಮಾರನ ದ್ರವ್ಯ ವಿಷವಿನ್ನು ಆದೀತು ॥ಹು॥ ಗಿಡಭಕ್ತರೆಲ್ಲ ಗಿಡಾಗನ ಕಟ್ಯಾರು ॥ಹು॥ ನಡೆದುಹೋದೀತು ರೂಢಿಯ ದೇಶಕ್ಕೆ ॥ಹು॥ ರಾಮರಾಜರ ದಂಡು ಶೀಮೆಯ ಹಿಡಿದಾರು । ಕಾಮುಲಾಪುರದ ಬೈಲಲಿ ನಿಂತಾರು । ಪೀಮುಕೂಟಕ್ಕೆ ಪ್ರೇಮುದಿಂ ಬಂದಾರು ॥ಹು॥ ಕಾಮಿತ ಫಲಗಳ ಬೇಡುತ್ತ ಕೊಡುವಾರು ॥ಹು॥ ಹುಗ್ಗಿಯ ಹುಯಿಸಾರು ಮಾಯ ನಗರಕ್ಕೆ ॥ಹು॥ ನಗ್ಗಾವಲರ ಮನೆಗಳು ಕಟ್ಯಾರು ॥ಹು॥ ಸ್ವರ್ಗಲೋಕ ಮೆಚ್ಚಿ ಭರ್ಗನ ಕೃಪೆಯಿಂದ ಎಂಟು ವರುಷಕ್ಕೆ ॥ಹು॥ ಸುಂಟರಗಾಳಿ ಎದ್ದೆಂಟು ವರುಷಕ್ಕೆ॥ಹು॥ ಕಂಟಾಳ ಅವನೀಗೆ ದೊರಕೀತು ಆವಾಗ ಸತ್ಯವನ್ನೇ ಬಿಟ್ಟು ಹುಚ್ಚಿದ್ದು ತಿರುಗ್ಯಾರು ॥ಹು॥ ಮತಬಾರ ಕಚ್ಚೆದ್ದು ಮುಸಗೀತು ಮುಂದಿನ್ನು ॥ಹು॥ ತಾನೇ ನಡೆದೀತು ರೂಢಿಯ ದೇಶಕ್ಕೆ ॥ಹು॥ ಬಿಟ್ಟಪಟ್ಟಣ ಬಿಡದೆ ತಾನಾಳ್ಯಾರು ॥ಹು॥ ಸಟೆಯಲ್ಲ ಈ ಮಾತು ಶಿವನಾಣೆ ಮುಂದಿನ್ನೂ ॥ಹು॥ ತುಂಗಭದ್ರೆ ಭೀಮರತಿಗಾಗಿ ಬಂದಾರು ॥ಹು॥ ಗಂಗೆಯು ಬಂದಾರು ಗೋದಾ-ವರಿ ನದಿಯ ತೀರ್ಥಕ್ಕೆ ॥ಹು॥ ವಾರಾಣಿ ಅಲ್ಲಿ ರಾಮನ ತೀರ್ಥಕ್ಕೆ ॥ಹು॥ ಕಾರುಣ್ಯಸ್ಥಳಗಾಳ ಮಾಡ್ಯಾರು ಮುಂದಿನ್ನು ॥ಹು॥ ಪಾಂಡೋರಗಂಗೆ ಹೋಗಿ ವಿಠಲನ ತಗೆದಾರು ತಕ್ಕೊಂಡು ಬಂದಾರು ವಿಜಯನಗರಕ್ಕೆ ನಂಬಿ ಹೇಳಿದ ಮಾಳು ಸುಬ್ಬಯ್ಯ ಪಾಣ್ಣ ಹುಯ್ಯಾಳಿ ಡಂಗೂರವಾ ॥

Vidyaranya Text Book Centre, Sringeri

CC-O. In Public Domain. Digitized by eGangotri

ನೀಲಮ್ಮನವರ ಕಾಲಜ್ಞಾನವು

ಸುವ್ವಿ ಬಾ ಸಂಗಯ್ಯ । ಸುವ್ವಿ ಬಾ ಲಿಂಗಯ್ಯ । ಸುವ್ವಿ ಬಾ ಚನ್ನ ಬಸವಯ್ಯ ಸುವ್ವಿ ॥ಪ॥ ಸುವ್ವಿ ಬಾ॥ ಚನ್ನಬಸವಯ್ಯ ಬರುವಾಗ ಹುಯ್ಯಾಲಂಬೊಬ್ಬೆ ಜಗಕ್ಕೆಲ್ಲ ॥ ಅಕ್ಕ ನಾಗಮ್ಮನು ಚಿಕ್ಕವನಿಕೆಯ ಪಿಡಿದು ಅಕ್ಕಿ ನವಮ್ಮಾವ ತೊಳೆಸುತ್ತ ॥ಸು॥ ಅಕ್ಕಿನವಮ್ಮಾನ ತೊಳೆಸುತ್ತ ಪಾಡಿದರು ಮುಕ್ಕಣ್ಣ ಶಿವನು ಬರುವಾಗ ॥ಸು॥ ಕಟ್ಟೋಣ ಬನ್ನೀರಿ ಪಟ್ಟಣದ ಸತಿಯಾರು ಹುಟ್ಟು ಕರ್ಮಗಳು ಅಳಿವಂತೆ ॥ಸು॥ ಹುಟ್ಟು ಕರ್ಮಗಳು ಅಳಿವಂತೆ ತೊಳೆಸುತ್ತಾ ಪಟ್ಟಣಕ್ಕೆ ಶಿವನು ಬರುವಾಗ ॥ಸು॥ ನಮ್ಮಯ್ಯ ಬರುವಾಗ ಉಮ್ಮಾಯ ಶರಣಾರು ಕರ್ಮದ ಲೋಕವುಳಿಯಾವು ॥ ಕರ್ಮದ ಲೋಕ ಉಳಿಯಾವು ಮುಂದಿನ್ನು ಧರ್ಮದ ಗುರುಬಸವ ಬರುವಾಗ ॥ ಕಾರ ಣೀಕವು ದಿನವು ಮುಂದಿನ್ನು ಘೋರಪಾತಕದಿಂದ ಬಂತು ॥ ಸು ॥ ಏಳೂರಿ ಗೊಂದೂರು ಏಳು ಸುತ್ತಿನ ಕೋಟೆ ಹಾಳಾಗುತ್ತದೆ ಜಗವೆಲ್ಲಾ ॥ ಹಾಳಾಗು ತ್ತಾವೆ ಜಗವೆಲ್ಲ ಮುಂದಿನ್ನು ಖೂಳರಕ್ಕಾಸಿ ಬರುವಾಗ ॥ಸು॥ ದಿನಮಾನ ದುರ್ಗಿಯರು ಅನುವಾಗಿ ಬರುವಾಗ ಮನುಜಾರ ದುಃಖವಿಪರೀತಾ ॥ಸು॥ ಮನುಜಾರದುಃಖ ವಿಪರೀತ ಮಹಮಾಯಿ ಘನದಂಡುಕೂಡಿಬರುವಾಗ॥ಸು॥ ಅಗಾರ ಅಳಿದಾವು ಗೂಗೆಗಳ್ಹಾದಾವು ಕಾಗೆ ದಂಡು ಬರುವಾಗ ॥ ಸು ॥ ಕಾಗೆಯ ದಂಡು ಬರುವಾಗ ಜಗವೆಲ್ಲ ಕೂಗು ಬೊಬ್ಬೆಗಳು ಮನೆಮನೆಗೆ ॥ಸು॥ ಅಣ್ಣಗಳ ದಿನಗಾಳು ಹಣ್ಣಾಗಿ ಬರುವಾ ಕಣ್ಣೀಲಿ ಕಾಣೆವೇನಬ್ಯಾಡೀ ॥ಸು॥ ಕಣ್ಣೀಲೀ ಕಾಣೆವೇನಬ್ಯಾಡೀ ಮುಂದಿನ್ನು ಮಣ್ಣು ಹುಯಿಕೊಂಬೋ ದಿನ ಬಂತು ॥ಸು॥ ಅಗ್ಗಾಗ ದಿನಗಾಳು ನುಗ್ಗುತ ಬರುವಾಗ ಸುಗ್ಗಿ ಹೋಳಿಗೆ ಕನಸಿನ ॥ಸು॥ ಕಾಣದೆ ಬೊಬ್ಬೆ ಹುಯಿಕೊಂಬೊ ದಿನ ಬಂತು ಬೀಸೀತು ಬಿರುಗಾಳಿ ಈಶಾನ್ಯದಿಕ್ಕಿನಲಿ ದೇಶಮಂಡಲವ ಮುಸುಕೀತು॥ಸು॥ ಕೆಂಭೋಳು ಮೋಸಮಾಡುವದು ಮಳೆಗಾಲ ॥ಸು॥ ಬಚ್ಚಲಮೊಳಿಹಗಾಳು ಹಸ್ತಾಯ ಶರಣರಿಗೆ ಎಚ್ಚಾರಿಕೀನಬೇಕು ಉದಕಕ್ಕೆ ಈ ಮಾತು ಹುಚ್ಚು ನುಡಿಯೆಂದು ಎನಬ್ಯಾಡ ॥ಸು॥ ನಾಲ್ಕು ದಿಕ್ಕಿನ ಮೂಲೆ ಏಕಾಗಿ ಉದರೀಳು ಲೋಕಾದ ಕರ್ಮ ಅಳಿದೀತು ॥ಸು॥ ಮಹಮಾಯಿಪಾಕ ಮಾಡುವಳು ಧರಿಣೀಯ॥ಸು॥ ಆಸಮದುರ್ಗಿಯ ಕಸವೆಲ್ಲ ಗುಡಿಸುತ್ತ ಹಸನು ಮಾಡುವಳು ಜಗವೆಲ್ಲ

Sri Vidyabharathi Book Centre, Sringeri

CC-O. In Public Domain. Digitized by eGangotri

ಮಹಮಾಯಿದೆಸೆಯ ನೋಡುವಳು ಶರಣರ ॥ಸು॥ ಕಾಲಮೇಘದಿ ಮಳೆಯ ಸೂರ್ಯನ ನುಂಗುವುದು ಮೂರೇಳು ದಿನವು ಮುಳುಗುವುದು ॥ಸು॥ ಮೂರೇಳು ದಿನವು ಮುಳುಗುವುದು ಮರ್ತ್ಯಕ್ಕೆ ವೀರವಸಂತ ಬರುವಾಗ ॥ಸು॥ ಹುಟ್ಟಿದೆಳು ದಿವಸಕ್ಕೆ ಬೆಟ್ಟಗಳು ನಡುಗ್ಯಾವು ಬೆಟ್ಟದ ಗುಂಡು ಉರ– ಳ್ಯಾವು ॥ಸು॥ ಜಿಟ್ಟಿದ ಗುಂಡ ಉರುಳ್ಯಾವು ಚನ್ನಬಸವ ಸೃಷ್ಟಿಪಾಲಕರು ಬರುವಾಗ ॥ಸು॥ ಚಂದ್ರ ಸೂರ್ಯಗ್ರಹಣ ಒಂದೇ ಮಾಸದಿ ಬರಲು ತಂದೆ ಕೊಂದು ಮರುದಿನಕ್ಕೆ ಮುಂದಿನ್ನು ನಂದಿವಾಹನ ಬಸವಾ ಬರು ವಾಗ ॥ಸು। ಆಡು ಆನೆಯ ನುಂಗಿ ಕಾಡಾನೆಗೆರಡು ಗುರಿಮಾಡಿ ಮುಂದಿನ್ನು ಮೂಢಜನರಿಗೆ ತಿಳಿಯಾದು ॥ಸು॥ ಇಲಿ ಬೆಕ್ಕು ನುಂಗುತ್ತಾ ಮೊಲದ ನಾಯಿ ತಡದೀತು ಹುಲಿ ಹುಲ್ಲಿಗಳಿಗೆ ಕದಡಾಟವು ಮುಂದಿನ್ನು ಖೂಳ ಮನುಜರಿಗೆ ತಿಳಿಯದು ॥ಸು॥ ಹುಲ್ಲೆ ಹುಲಿಗಳ ನುಂಗಿ ಅರಿಮರಿಗಳ ಕಡಿದು ಕಲ್ಲಿನ ಕಪ್ಪೆ ಸರ್ಪಾನ ॥ಸು॥ ಕಲ್ಲಿನ ಕಪ್ಪೆ ಸರ್ಪಾನ ನುಂಗುವುದು ಜೊಳ್ಳು ಮನುಜರಿಗೆ ತಿಳಿಯಾದು ॥ಸು॥ ಅತ್ತೆ ಅಳಿಯಾನ ಹೊಡೆದು ಕುತ್ತಿಗೆಯ ಮುರಿದಾಳು ರಕ್ತಾವ ಕುಡಿದು ನಗುವಾಳು ॥ಸು! ರಕ್ತಾನ ಕುಡಿದು ನಗು ವಾಳು ಅವ ಕಂಡು ಮತ್ತೆ ಮೊಮ್ಮಗಳು ಅಳುತ್ತಿದ್ದ ॥ಸು॥ ಹೆಂಡತಿ ಗಂಡನ ಹೊಡೆದು ಮಂಡೆಯನ್ನೊಡೆವಳು ಕಂಡಾ ರಕ್ತಾವ ಸುರಿಸುವಳು। ಕಂಡಾ ರಕಾವ ಸುರಿಸುವಳು ಅದ ಕಂಡು ರಂಡೆಯ ಮಗನು ಅಳುತ್ತಿದ್ದ ॥ ಕತ್ತಲೆಯ ಜ್ಯೋತಿಯ ಮುತ್ತಿ ತಾ ನುಂಗುವಳು ಹೆತ್ತ ತಾಯಿಯ ಮಗಳು ಅವಳೈಕ್ಯ ಮಾಡುವಳು ಇದರರ್ಥ ಮನುಜರಿಗೆ ತಿಳಿಯಾದು ॥ಸು॥ ಅಟ್ಟಾ ಅಡಿಗೆಯವನು ಉಂಟ್ಯೋಂದು ನುಂಗುವುದು ಶರಧೀಯ। ಉಂಟ್ಯೋಂದು ನುಂಗುವುದು ಶರಧೀಯ ಚನ್ನಬಸವ ಹುಟ್ಟಿ ತಾನೆದ್ದು ಬರುವಾಗ ॥ಸು॥ ಶರಣಾರ ವಾಕ್ಯದಿಂದ ವೀರವಸಂತ ಹುಟ್ಟಿ ಮರಣದಿಕ್ಕಿಗೆ ಬಂದು ಕುಳಿತಾನು. ವರುಣ ದಿಕ್ಕಿಗೆ ಬಂದು ಕುಳಿತಾನು ವಸಂತ ಕಿರಣ ಸೂರ್ಯನ ಬೆಳಕೀಲಿ ॥ಸು॥ ಶಾಪಕ್ಕೊಳಗಾದವರು ಭೂಪರಿಬ್ಬರು ಕೂಡಿ ಶ್ರೀ ಪರಂಜ್ಯೋತಿ ಕಲ್ಯಾಣಕ್ಕೆ ಬರುವಾಗ ॥ಸು॥ ನಾರಿ ನೀಲವ್ಯಾನು ಸಾರಿ ಹೇಳಿದಮಾತು ವೀರವಸಂತ ಚನ್ನಬಸವಾ ॥ಸು॥ ವೀರವಸಂತ ಚನ್ನಬಸವಣ್ಣ ಶರಣರಿಗೆ ಸಾರಿದ ಪಟ್ಟ ಅವಂಗೆ ॥ಸು॥೧॥

Sri Vidyabharathi Book Centre, Sringeri

CC-O. In Public Domain. Digitized by eGangotri

ಸುಳ್ಳುಸುಳ್ಳೆನುತಾರೆ ಕಾಲಜ್ಞಾನ ಸುಳ್ಳಾಗಬಹುದೇನೋ ಕಾಲಜ್ಞಾನ
ಸುಳ್ಳಾಗಬಲ್ಲುದೇನೋಕಲ್ಯಾಣದೇವರು ಹೇಳಿದ ಮಾತು ಸಟೆಯಲ್ಲ ಬಲ್ಲವರು
ಬಲ್ಲರಣ್ಣ ॥೧॥ ಅಣ್ಣ ತಂಗಿಯ ಹೋಲೆಲೊಲ್ಲೆ । ಮುಂದಿನ್ನು ಸಣ್ಣನಾಮ
ದವನುಬರುವುದಿಲ್ಲೆ ಬಣ್ಣಾದ ಅರಮನೆಗೆ ಹಾಳುಬಿದ್ದಂತದನು ಕಣ್ಣಿಲಿ ಕಾಣ
ಲಿಲ್ಲೆ ॥೨॥ ಕದಕ್ಕೇಳುವತ್ತಲಿಲ್ಲೆ ಒಡಹುಟ್ಟಿದಕ್ಕನ ಹೋಗಲಿಲ್ಲೆ । ಬಡವರು
ಬಡಿದಾಡಿ ಮನೆಮನೆ ಕೂಳಿಗೆ ಭಿಕ್ಷವನುಬೇಡಲಿಲ್ಲೆ ॥೩॥ ಸನ್ಯಾಸ ಕೆಟ್ಟುದಿಲ್ಲೆ
ಹೊನ್ನುಳ ಅರದಿಗರು ಆಣೆಯಲಿಲ್ಲೆ ಅನ್ಯಾಯ ಹೆಚ್ಚಾಗಿ ಅಷ್ಟದಿಕ್ಕಿನ ಸೂರೆ
ಅನ್ನಾರು ಕಾಣಲಿಲ್ಲೆ ರಂಡೆಯರು ಮನೆಮನೆಗೆ ಅಜ್ಞಾ । ಗರ್ಭಿಣಿಯರಾಗಿ
ಕೆಡುವರಣ್ಣಾ ಗಂಡಗು ಮಿಂಡಗು ಒಂದೆ ಪಂಕ್ತಿಯಲ್ಲಿ ಊಟದಂಡ ಪೂರಿಗ
ಗಣ್ಣ ॥೪॥ ಹೊಲೆಮನೆ ಉದ್ಯೋಗವು ಕೆಟ್ಟು ಮಳೆಬೆಳಗಳತಿ ಶೂನ್ಯವು ಹಟವು
ಪರಿಯಲ್ಲಿ ಚಿಂತೆ ಸುಖ ಜನರಿಗೆ ಇಲ್ಲಾ ॥ ಕಲಹ ಊರೂರಿಗಣ್ಣಾ ॥೬॥
ಧರ್ಮವು ಮುಳುಗಲಿಲ್ಲೆ ಮನೆಮನೆಗೆ ಕರ್ಮವು ಹೆಚ್ಚಲಿಲ್ಲೆ ಅರಮನೆಯವರ
ನಾಲಿಗೆ ತಪ್ಪಿ ರೊಕ್ಕವನು ನೇಮನೇಮದಿ ಸುಳಿಯಲಿಲ್ಲೆ ॥೭॥ ಅರಸು ಆಳಾಗ
ಲಿಲ್ಲೆ ಜಗದೊಳಗೆ ಗರತಿ ಸುಳ್ಯಾಗಲಿಲ್ಲೆ ನರಗುರುವೆನಿಸಿ ನಲಿದಾಡೋದಿಲ್ಲೆ
ಸುರೆಯ ಸರ್ವರೂ ಕುಡಿಯೋದಿಲ್ಲೆ । ಕಳವು ಬಹಳಚ್ಚಲಲ್ಲೆ । ಕಲಿಯೊಳಗೆ
ಅತ್ತೇ ಅಳಿಯನ ಹೋಗಲಿಲ್ಲೆ ॥ ಕೂಳುಗಳು ಬಹಳವಾಗಿ ಹಿರಿಯರೊಳಗೆ
ಮರಿಯಾದೆ ತಪ್ಪಲಿಲ್ಲೆ ॥ ಕ್ರಿಯೆಗಳು ತಪ್ಪಲಿಲ್ಲೇ ತಾಯಿಗೆ ಮಕ್ಕಳು ಹೋಗ
ಲಿಲ್ಲೆ ॥ ಬಾಯಿ ಬಿನ್ನಾಣ ಮಾತು ಒಳಗೊಂದು ಹೊರಗೊಂದ ಚಾಯವನು
ಕಲಿಯಲಿಲ್ಲೆ ॥ ಭವಿ ಭಕ್ತರಾಗಲಿಲ್ಲೆ ॥ ಶಿವ ಭವಿಯನ್ನು ಹೋಗಲಿಲ್ಲೆ ॥
ಭಾವನರಿದು ನೀ ಹೋಗುನ್ಯಾಯವನ್ನು ಹೇಳುವುದು ಕಲಿಯೊಳಗೆ ಕಾಣಲಲ್ಲೆ
ಭಾಷೆಗೆ ತಪ್ಪಲಿಲ್ಲೆ ಗಂಡನಿಗೆ ವಿಷಮದ್ದನಿಕ್ಕಲಿಲ್ಲೆ ॥ ಪೇಶಿಯರು ಗುರುತ್ಯಾಗಿ
ಮನೆಯೊಳಗೆ ಇರುವನು ದೇಶದೊಳು ಕಾಣಲಿಲ್ಲೆ ॥ ಜಂಗಮರು ಕೆಟ್ಟುದಿಲ್ಲೆ
ಲಿಂಗವನು ಕಳೆಗೊಂಡು ಕೆಟ್ಟುದಿಲ್ಲೆ। ಜಂಗುಳಿ ದೈವಾದಪೂಜೆ ಮಾಡುವುದನು
ಹೆಂಗ್ಯಾಟ ಕಾಣಲಿಲ್ಲೆ । ಮನಸೊಕ್ಕಿ ಮುರಿಯಲಿಲ್ಲೆ ಗದಗಿನೊಳು ತೇರನ್ನುಯ್ಯ
ಲಿಲ್ಲೆ । ಕಂದಿದುರಂಗಾನು ಹಾಳಾಗಿ ಹೋದನು ಸಾಧಿಸಿ ನೋಡಲಿಲ್ಲೆ ॥ಇಷ್ಟಾ
ದರೂ ತಿಳಿಯಲಿಲ್ಲೆಮೌನಯ್ಯ ಕಟ್ಟಕ್ಕೆ ಬರುವುದಿಲ್ಲೆ । ಕಷ್ಟ ಕಾಲವು ಬಂತು
ನಾಚಿಗೆ ಬರಲಿಲ್ಲೆ ದುಷ್ಟರಿಗೆ ಕಾಲವಲ್ಲೆನ್ನಿರೆ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಜ್ಞಾನಮಾರ್ಗ ತತ್ವಗಳು

ಜಂಗವು ಪರಿಯೆಂತು ಲಿಂಗೈಕ್ಯಪಥದಲ್ಲಿ । ಲಿಂಗ ಜಂಗವುರೆಂಬುದು ಪೇಳಿರಣ್ಣಾ ॥ಪ॥ ಪಡಸ್ಥಲದ ನೆಲೆಯೆಂತು ಮೃಡನಿರ್ಪ ಅರುವೆಲ್ಲಿ ಪಡುಮೃಗ ಸ್ಥಳದೊಡನೆ ಅಡಗೆರುವೆಂತೂ ॥ ನಡೆನುಡಿಳನು ನರೆಬಿಡದವೆಂದು ಪೇಳಿದಿರಿ । ಮೃಡನೊಡನೆ ಬೆರತು ನಡೆವರೆ ಜಂಗಮರು ॥೧॥ ಜಂಗಮದ ಪಾದೋದಕದ ಪರಿಯೇ । ಶೋಧಿಸುವ ಕ್ರಮವನೂ ಶೋಸಿದುದಕವನು ಸವಿತುಂಬಿತೆಂದೂ ನಾದವಡಗಿರುವಂತೆ ನಾಳಬಂಧನವೆಲ್ಲಿ । ಇದಿರಾದಿಯನು ತಿಳಿದಮರ ಆದಿಜಂಗ ಮರು ॥೨॥ ಅಷ್ಟವಿಧ ದೇವತಾರ್ಚನೆಯ ನಿಷ್ಠೆ ಮಾಡುವ ಜ್ಞಾನಿ।ಅಷ್ಟಪೂಜೆಗೆ ಸೃಷ್ಟಿಯೊಳಗಿಹುದು।ಸೃಷ್ಟಿಯೊಳಿಗೊಪ್ಪಿ ಶಿವನಿವನಿರುವ ಅರುವೆಲ್ಲಿ । ಇದರಿಷ್ಟವನು ತಿಳಿದವರು ನಿಷ್ಟ ಜಂಗಮರು॥೩॥ ಪರಮ ಪ್ರಸಾದವನು ಹುರಿಗೊಳಿಪ ತಾವೆಂತು । ಪಿರಿದೆಂಬೊ ಶಿವನಿರುವ ನೆಲೆಯಾವದೆಂದೂ । ಗುರುವೇ ಗತಿಯೆಂದು ಅರುವು ನಿಶ್ಚಯಮಾಡಿ ಈಅರುಸೊಳು ಬೆರೆತರು ಪರಮ ಜಂಗಮರು ॥೪॥ ಅಕಾರ ಉಕಾರ ಮಕಾರವೆಂತೆಂಬೊ ಓಂಕಾರನಾದ ಸದ್ಗುರು ವಿನಂಘ್ರಿಯೊಳು॥ತಾ ಕೂಡಿ ಬೆರೆದಿರ್ಪ ಅವಧೂತ ಮುರಹರಿಯು ಓಂಕಾರದೊಳಗೊಪ್ಪಿದರು ಜಂಗಮರೂ ॥೫॥

ಶಿವಶಿವ ಬೇರಿಲ್ಲ ನಿನ್ನಲ್ಲಿಹನು ದೂರಿಲ್ಲಾ । ಎಲ್ಲಿಗೆ ಹೋದರೂ ನೆಲೆಯಿಲ್ಲ । ಕಂಡಕೆಲಕಾಲಬಿದ್ದರೆ ಇಲ್ಲಾ ॥ಪ॥ ಕಾಲಮೇಲಕೆ ಮಾಡಿದರಿಲ್ಲಾ । ದೇಶದ ಮೂಲೆ ಮೂಲೆತಿರುಗಿದರಿಲ್ಲಾ । ಮೇಲೆ ಮುಗಿಲಿಗಾರಿದರಿಲ್ಲಾ।ನೂರು ಲೋಕವ ನೀ ದನಿದರಿಲ್ಲಾ ॥೧॥ದೃಢವಿಲ್ಲದೆ ತಿರುಗಿದರಿಲ್ಲಾ । ಇದು ಬಡಿವಾರ ಮನಸಿನಂಬಿಕಲ್ಲಾ ದೃಢವಿಡಿದು ನೀ ನಡಿಯಲಿಲ್ಲಾ । ನಿನ್ನೊಡಲೊಳಗೆ ಮನ । ಸೇರದಲ್ಲಾ ॥೨॥ ನಿದ್ದೆ ಸಾವಿಗೆ ದೂರಿಲ್ಲಾ ನೀ ಬದ್ಧವಂತರನ ಕೇಳಿಲ್ಲಾ ॥ ಜೀವ ಶಿವರಿಗೆ ಏನು ಭೇದವಿಲ್ಲಾ । ಗೊತ್ತಿದ್ದ ಮಡಿವಾಳಗೆ ದೂರಿಲ್ಲಾ । ಶಿವ ಶಿವ ಬೇರಿಲ್ಲ ॥

CC-O. In Public Domain. Digitized by eGangotri

ಸರ್ವಜ್ಞ ಮೂರ್ತಿಯ ಕಾಲಜ್ಞಾನವು

ಬಸವನೆನೆಗೆ ನಿರೂ । ಪಿಸಿದಾ ಕಾಲಜ್ಞಾನ ।
ಬಸವನು ಇಟ್ಟು ಮರ್ತ್ಯರಿರುವನು ನಿಮ್ಮ । ಶಿಶುವಾಗಿ ಪೇಳ್ವೆ ಸರ್ವಜ್ಞ ॥೧॥
ನಂಬಿ ಹೇಳುವೆ ಬಸವ । ನಂಬಿನಾ ಮಹಿಮೆಯನು ।
ಶಂಭುವಿನ ಕರುಣ ನಿಮಗುಂಟು ನಾನಿಮಗೆ । ಹೇಳುವೆನು ಸರ್ವಜ್ಞ ॥೨॥
ಒಪ್ಪ ಭಸಿತನಪಟ್ಟ್ಯ । ಕರ್ಪೂರ ವೀಳೆಯ ಕೊಟ್ಟ್ಯ ।
ಕಪ್ಪು ಗೊರಳನಾ ಕರುಣದಿಂ ಇದನರಿತು । ಒಪ್ಪಿ ಹೇಳಿದನು ಸರ್ವಜ್ಞ ॥೩॥
ಮಳೆಗಳನು ಕುಡಿಯುವನು । ಬೆಳೆಗಳನು ಮುಕ್ಕುವನು ।
ಬಳಗಗಳನ್ನೆಲ್ಲ ಮುರಿಯುವನು ಜಗದೊಳಗೆ । ಉಳಿದವರೆ ಇಲ್ಲ ಸರ್ವಜ್ಞ ॥೪॥
ವೀರಬಸಂತನು ।ಧೀರ ಬಿಜ್ಜಳ ತಾನು ।
ಮಿಂಡಿ ಕಲಿದೇವ ನಡೆದಾನು ಅವನೊಡನೆ । ಹೋರುವವರಿಲ್ಲ ಸರ್ವಜ್ಞ ॥೫॥
ಆಗಮಗಳಳಿದಾವು । ಗೂಗೆ ಮರಕಿಳಿದಾವು ।
ಕಾಗೆಗಳು ಎದ್ದು ಬಡಿದಾವು ಧೊರೆಗಳುರೆ । ಮೂಗರಾದಂದು ಸರ್ವಜ್ಞ ॥೬॥
ಧಾರುಣಿಯು ನಡುಗುವುದು । ಮೇರು ಅಲ್ಲಾಡುವುದು ।
ವಾರನಿಧಿ ಬತ್ತಿ ಬಯಲಹುದು । ಶಿವಭಕ್ತ । ಏರದಿರದಂದು ಸರ್ವಜ್ಞ ॥೭॥
ಹರನ ಗರಿಗುಡಿಗಳಲಿ । ಸುರೆ ಮಾಂಸ ಮಾರೀತು ।
ಶರಣರ್ಗೆ ಹರಣ ಪಿರಿದಾಗಿ ಜಗದಲಿ । ಹರದಾಳಿ ನೋಡ । ಸರ್ವಜ್ಞ ॥೮॥
ಆರೆದಾರು ಮೆರೆದಾರು ! ಉರಿದಾರು ಜಗದೊಳಗೆ ।
ಕುರಿಗಳಾ ತಲೆಯು ತರದಂತೆ ರಕ್ತವನು । ಸುರಿದಾರು ನೋಡ ಸರ್ವಜ್ಞ ॥೯॥
ಹೆತ್ತ ತಂದೆಯ ಕೊಂದು । ಮತ್ತದಿಂ ವಿರೂಪಾಕ್ಷ ।
ಚೆತ್ತಲೆಯು ಹೆಣ್ಣಿಗೊಳಗಾಗಿ ರಾಜ್ಯವದು । ಕತ್ತಲಾದೀತು ಸರ್ವಜ್ಞ ॥೧೦॥
ನರರ ಬಲಿಗಳ ಕೊಟ್ಟು ಕುರಿಕೋಣಗಳ ಕಡಿದು ।
ಸರುವ ಭಂಡಾರವನು ಒಡೆದು ಸರುವರಾ । ಶಿರಗಳರಿದಾರು ಸರ್ವಜ್ಞ ॥೧೧॥
ಸೂಳೆಯಲಿ ಮಗಹುಟ್ಟಿ । ಆಳುವನು ಮುನಿಪುರವ ।
ಕಾಳಗವು ಇಲ್ಲದವ ಮಡಿಯೆ ಪುರವೆಲ್ಲ। ಕೋಳು ಹೋದೀತು ಸರ್ವಜ್ಞ ॥೧೨॥
ಚಂದ್ರಸೂರ್ಯರು ಗ್ರಹಣ ಒಂದೇ ಮಾಸದಿ ಬಂದು ।
ತಂದೆಯಾ ಕಂದನಿರದಂದು ಲೋಕಕ್ಕೆ । ಬಂದೀತು ಪ್ರಳಯ ಸರ್ವಜ್ಞ ॥೧೩॥

Sri Vidyabharathi Book Centre, Sringeri

CC-O. In Public Domain. Digitized by eGangotri

ಪಟ್ಟವಿಲ್ಲದ ಶಿಶುವು । ಸೃಷ್ಟಿಯನು ಆಳೀತು ।
ಪಟ್ಟದರಸುಗಳು ಆಳೆಯಲಾ ಜಗವವನ । ಪಟ್ಟಣಕಾಣಯ್ಯಾ ಸರ್ವಜ್ಞ ॥೧೪॥
ಬಂಟನಾ ತಮ್ಮನಾ । ಆಳಯಗೂ ಮಾವಗೂ ।
ಗಂಟಿಕ್ಕಿ ಜಗಳ ಹೆಣ್ಣಾಲಾ ಜಗಕ್ಕೆಲ್ಲಾ । ಕಳಂಕವು ಎಂದ ಸರ್ವಜ್ಞ ॥೧೫॥
ರಂಗಪಟ್ಟಣದೊಳಗೆ । ರಂಗಭಕ್ತನು ಹುಟ್ಟಿ ।
ರಂಗನಾಪೂಜೆ ಬರಿದಾಗಲಾಪಟ್ಟ । ಭಂಗವಾದೀತು ಸರ್ವಜ್ಞ ॥೧೬॥
ಉತ್ತರ ದಿಕ್ಕಿನಲ್ಲಿ । ಹತ್ತೀತು ಹೆಬ್ಬೇಗೆ ।
ಸುತ್ತುವರುಕೊಂಡು ಬರುವಾಗ ಜಗವೆಲ್ಲ ಕತ್ತಲಾದೀತು ಸರ್ವಜ್ಞ ॥೧೭॥
ಎತ್ತು ಹೇರುವನಿಂದ । ತೊತ್ತಿನಾಮಗನಿಂದ ।
ಮುತ್ತು ಮೂರುವನ ದೆಸೆಯಿಂದ ಜಗಕೆಲ್ಲ । ಕುತ್ತಕಾಣಯ್ಯ ಸರ್ವಜ್ಞ ॥೧೮॥
ಮುತ್ತೊಡೆದು ಹತ್ತಿರಲು । ಮುತ್ತಾನ ಸತ್ತಿರಲು ।
ಹುತ್ತುವನು ಏರಿ ನರಿಕೂಗೆ ಜಗಕ್ಕೆಲ್ಲ ಕುತ್ತ ಕಾಣಯ್ಯ ಸರ್ವಜ್ಞ ॥೧೯॥
ಕುಂಬಾರ ಹೊಟ್ಟೆಯಲಿ । ಪಿಂಜಾರ ಹುಟ್ಟುವನು ।
ಕುಂಭಿಕುಂಭಗಳನಲಿಯುತಲಿ ಕುಂಭನಿಯೊಳಿಂಬುಗೊಂಡಾನುಸರ್ವಜ್ಞ ॥೨೦॥
ಸುತ್ತು ಯೋಜನದೊಳಗೆ ಸತ್ತ ಹೆಣಗಳು ಸುತ್ತು ।
ಮುತ್ತಿದ್ದ ಹದ್ದು ಕಾಗೆಗಳ ರಾಶಿ । ಕಣ್ಣೆತ್ತಿ ನೋಡೆಂದ ಸರ್ವಜ್ಞ ॥೨೧॥
ಪೇಟೆಯಾ ಬಸ್ತಿಯನು । ಆಟದಲ್ಲಿ ಒಡೆದಾರು ।
ಆಟದಲ್ಲಿ ಒಡೆದ ಆರನೆಯ ವರ್ಷಕ್ಕೆ ನೀಟಾಗಿ ಬರುವ ಸರ್ವಜ್ಞ ॥೨೨॥
ಹೆಣ್ಣಿನಾ ದೆಸೆಯಿಂದ । ರಣ್ಯಕ್ಕೆ ನಡೆತಂದು ।
ಹಣ್ಣೆತ್ತು ಜಗಳ ಗಚ್ಚಿನುವ ಮಂತ್ರಿಗಳ ಅಣ್ಣ ಬಂದಾನು ಸರ್ವಜ್ಞ ॥೨೩॥
ಕಲ್ಲುಕೋಟೆಯಲ್ಲೊಬ್ಬ । ಬಲ್ಲಿದನು ಕೆರೆಕಟ್ಟಿ ।
ಗೊಲ್ಲಗೊಲ್ಲರಾ ಜಗಳದಲ್ಲಿ ಜಗವೆಲ್ಲ ತಲ್ಲಣವು ಎಂದ ಸರ್ವಜ್ಞ ॥೨೪॥

ಸರ್ವಜ್ಞಮೂರ್ತಿ ಕಾಲಜ್ಞಾನವು ಸಂಪೂರ್ಣಂ.

—೦—

Sri Vidyabharathi Book Centre, Sringeri

CC-O. In Public Domain. Digitized by eGangotri

ಕಿನ್ನರಿ ಬ್ರಹ್ಮಯ್ಯಗಳ ಕಾಲಜ್ಞಾನವು

ಈಗಲೇನಾಯ್ತು ಕೇಳಂಣ ಜಗಕ್ಕೆ ಬ್ಯಾಗೆ ಹಚ್ಚಿದೆ । ಬಿಡನು ಚನ್ನ ಬಸವಂಣ ॥ಪಲ॥ ಮಳೆ ಬೆಳೆಗಳು ಅಳಿಯದ ತನಕ । ಎಲ್ಲ ಜಲಬತ್ತಿ ಎಲ್ಲೆಲ್ಲ ನೀರಿಲ್ಲದತನಕಾ।ಜಲಚರಾದಿಗಳಳಿಯದತನಕ।ತಿರುಮಲೆಯ ದ್ರವ್ಯವ ತಂದು ಹಂಪಯಲಿ ಹಂಚದ ತನಕ ॥೧॥ ಮಾರಿದುರ್ಗಿಯ ಕೀಳುದ ತನಕ ಹೆಚ್ಚಿನ ಮೂರು ಸ್ಥಳಂಗಳಿಗೆ ।ಬೆಂಕಿಯ ಹಚ್ಚದ ತನಕ । ಶ್ರೀರಂಗ ಅಳಾಗದ ತನಕ ಹಾರೋರಿಗೆಲ್ಲ ಸುಂತಿಯನ್ನು ಮಾಡಿ ಕಂಡವ ತಿನಸದ ತನಕ ॥೨॥

ಧರಣಿಯೊಳು ಉರಿಬಿಳದ ತನಕ । ಅರುದರುಶನದವರ ಮೋರೆಗೆ ಮುಳ್ಳು ಹಚ್ಚದ ತನಕ।ಶರದಿ ರೂಪವು ಬತ್ತದ ತನಕ।ಮತ್ತೆ ಹರಗಿ ಹಸನವ ಮಾಡಿ । ಹರಳನೆ ಬಿತ್ತದತನಕ ॥೩॥ ಭವಿಗೆ ಲಿಂಗವ ಕಟ್ಟಿದತನಕ । ಸುರೆಯ ಶಿವಭಕ್ತರು ಕುಡಿದು । ಮಾಂಸವ ತಿನ್ನದ ತನಕ । ರವಿಯು ಮೂರೇಳು ದಿನ ಮುಣಗದ ತನಕ।ಸರ್ವಜನಗಳಿಗೆ । ಮೂರು ಆರ್ಭೂತವು ತೋರದತನಕ॥೪॥ ಕೆಟ್ಟು ಬುದ್ಧಿಯಾ ನಳಿಯದ ತನಕ । ಕ್ರಿಯಾ ಭ್ರಷ್ಟರನ್ನೆಲ್ಲರ ತುಷ್ಟಿ ಸಾದಕ ತನಕ।ಗತಕ್ರಿಯ್ಯಾದೊಳಳಿಯದ ತನಕ।ನಿಮಗೆ ಶ್ರೇಷ್ಠವೆ ಚೆನ್ನಂಣನು ಹೇಗೆ ಡೊರಿಕ್ಯಾಲು ನಿಲುಕ್ಯಾನು ॥ ನಿಲುಕಾ ॥೫॥

ಕೋಟಿಕೊತ್ತಲ ಕೆಡಹದ ತನಕ।ಒಳ್ಳೇ ಮೀಟು ಮಿಟ್ಟಾದವರಲಾಟಸದ ತನಕ । ತೋಪ ತೋಪುಗಳಳಿಯದ ತನಕ । ಜನವಾಟಿಸಿ ಮಹಪುರುಪುರನು ತ್ಯಾರದ ತನಕ ॥೬॥ ಧೂಮಕೇತುಗಳ ಮೂಡದತನಕ ।ತೆಲಗು ರಾಮನು । ಲೋಕ ಲೋಕವನು ಸುಡದ ತನಕ । ಗ್ರಾಮಗ್ರಾಮಗಳಳಿಯದತನಕ । ಎಲ್ಲ ಭೂಮಿ ಪಾಲಕರು । ಕೆಟ್ಟು ಶೆರೆ ಸೂರಿ ನಷ್ಟವಾಗದ ತನಕ ॥೭॥

ವಿದ್ಯನಗರವು ತುಂಬದ ತನಕ।ಬಾರಿ ಸದ್ದಿಗೆ ಮುಸಲರ ಪಟ್ಟವು ಆಗದ ತನಕ । ಸಿದ್ಧ ಸಾಧಕರಳಿಯದ ತನಕ।ಹರಿಯ ಮದ ಮದ್ದುಗಳು ಏಳ್ನೂರು ವರುಷಕ್ಕೆ ಮುರಿಯದತನಕ ॥೮॥ ತಿಂಡಕಾನರು ಕೂಡದ ತನಕ । ಉತ್ತರದ ದಂಡೆದ್ದು ಹಂಪಿ । ಮಂಡಲದ ತಾರದ ತನಕ । ಕೆಂಡದ ಮಳೆಯು ಸುರಿಯದ ತನಕ । ಪಾಲಿ [illegible] ತನಕ ॥೯॥

Siddaganga Mutt Research Book Centre, Tumkur

CC-O. In Public Domain. Digitized by eGangotri

ಕೂಕಜನ ಊಳಿಗಕೆ ನಿಲ್ಲದ ತನಕ । ಮತ್ತೆ ಕೂಕ ಜನನೊಬ್ಬನ ದೃಷ್ಟಿಯು ಮುಚ್ಚಿನ ತನಕ । ಲೋಕದ ಜನವು ಸಂಹಾರವಾಗದ ತನಕ । ಮರ್ತ್ಯಲೋಕಕ್ಕೆ ಗಣ ರುದ್ರರು । ಬಾರದ ತನಕ ॥೧೦॥

ನಂದಿಯ ಧ್ವಜ ಮುರಿಯದ ತನಕ । ಅವರು ತಂದೆ ಚನ್ನದ ಪಾದವ ಹೊಂದಿಕೊಳ್ಳದ ತನಕ। ಮುಂದೆ ಶರಣರು। ಏಳದ ತನಕ। ನಡುವೆ ಬಂದಾನ ಬಾಧೆಗಳು ಬೀಡತೀರದ ತನಕ ॥೧೧॥

ಚಂದುಳ್ಳ ನಡೆ ಹುಟ್ಟದ ತನಕ।ಮುಂದೆ ಗೊಂದಿ ಕಣಿವೆಯಲೊಂದು ಪುರಕಟ್ಟದತನಕ । ನೊಂದವನಿಗೆ ಲಗ್ನಗಳಾಗದ ತನಕ । ಹಿಂದೆ ಬೆಂದವಗೆ ಕಲ್ಯಾಣದ ಪಟ್ಟವು ಆಗದತನಕ॥೧೨॥ ಶ್ರೀ ಶ್ರೀ ಶ್ರೀ ಶ್ರೀ ಶ್ರೀ

ಕನ್ನೆರಿ ಬ್ರಹ್ಮಯ್ಯಗಳ ಕಾಲಜ್ಞಾನವು ಸಮಾಪ್ತಿ.

ಶ್ರೀ ಸಿದ್ಧರಾಮೇಶ್ವರ ದೇವರ ಜೋಗುಳ

ಕಾಲಜ್ಞಾನವು

ಕೈಲಾಸದಿಂದ ತಿವನು ತಾ ಬಂದ ಗಂಧ!ಕಸ್ತುರಿ ಪುಷ್ಪ ಮಾಲೆಗಳಿಂದ। ಬಂದ ಶಾಕ ಪಾಕ ನೈವೇದ್ಯದಿಂದ ಜೋ ಜೋ ॥೧॥

ತ್ರಾಹಿ ತ್ರಾಹಿಮಾಂ ಕರುಣಕೃಪಾಂಗ । ತ್ರಾಹಿ ತ್ರಾಹಿಮಾಂ ಲಿಂಗ ಸುಸಂಗ । ತ್ರಾಹಿ ತ್ರಾಹಿಮಾಂ ಅಂದಾಗಳು ಲಿಂಗ । ಪ್ರಭು ತ್ರಾಹಿ ತ್ರಾಹಿಮಾಂ ದೀರ್ಘದಂಡ ಕೃಪಾಂಗ ಜೋ ಜೋ ॥೨॥

ಅತ್ತ ಕೈಲಾಸದೊಳು ಮಾರಿಮಥನ ತಾ ಹುಟ್ಟಿ । ಯಿತ್ತ ಕಲ್ಯಾಣ ದೊಳು ಯಿಪ್ಪತ್ತೈದು ಲೀಲೆಯ ತೊಟ್ಟು । ಹಿಂದಕ್ಕೆ ಹತ್ತು ಮುಂದಕ್ಕೆ ಹನ್ನೊಂದು ಬಾಯಿಲೆಕ್ಕವನಿಟ್ಟೇ॥ ಮುಂದೆ ಬರುವದ್ದು ವಿಳ್ಳೂರು ಎಂಬತ್ತು ವರುಷಕ್ಕೆ ಘಟ್ಟೇ ಜೋ ಜೋ ॥೩॥

Sri Vidyabharathi Book Centre, Sringeri.

CC-O. In Public Domain. Digitized by eGangotri

ಕಲ್ಯಾಣ ಪುರದೊಳು ಮಥನ ತಾ ಹುಟ್ಟೀ । ಹರಳೆಯ್ಯ । ಮಧು ವೈಯ್ಯ ಎಳಿಹೂಟೆ ಕಟ್ಟಿ । ಬಲ್ಲಿದ ಬಸವನ ಹಸ್ತಕರ್ಣಿಕೆ ಮುಟ್ಟೀ । ಅಲ್ಲಿ ಯಿಬರು ಹಟ್ಟೀ ಬಿಜ್ಜಳನ ಮೆಟ್ಟೀ ಜೋ ಜೋ ॥೪॥

ಮಡಿವಾಳ ಮಾಚಯ್ಯಂಬ ಶರಣ ತಾ ಹುಟ್ಟಿ । ನಿಂದಕ ದ್ರೋಹಿಯಾ ಹಲ್ಲು ಮುರಿಗುಟ್ಟೀ । ಯದುರಾದ ಭವಿಗಳನ್ನು ಯಿರಿದು ತಲೆಗುಟ್ಟೀ । ನಮ್ಮ ಶರಣ ಗಣಂಗಳು ಎಲ್ಲ ವುಳುವಿಗೆ ಮುಟ್ಟೀ ಜೋ ಜೋ ॥೫॥

ಮಾರಿಬಂದಳು ಮೃತ್ಯು ಲೋಕದಹಿಂದೆ । ಸಾರಿ ಬಂದವು ನಮ್ಮ ದಿನಗಳು ಮುಂದೆ । ನಾವು ಬಂದಂದಿಗೆ ನೀವು ಬಂದೀರಿ । ನಾವೂ ನೀವೂ ಕೂಡಿ ಬಂದಂದಿಗೆ ಹದಿಮೂರು ಆನಂದವೆನ್ನೀ ಜೋ ಜೋ ॥೬॥

ಪಟ್ಟಕ್ಕೆ ಚನ್ನಬಸವಂಣ ಬಂದಾ । ಯಿಂದುಧರನಾ ಪೂಜೆ ಮಾಡುವ ದಾನಂದಾ । ಬಂದ ಗಣಂಗಳ ದರುಸನದಿಂದಾ ಮುಂದೆ ಬರುವಾ ಆನಂದ ಪರಿಪೂರ್ಣವೆಂದಾ ಜೋಜೋ ॥೭॥

ಯೋಳು ವರುಷ ಪಟ್ಟದರಾಯ ತಾ ಹುಟ್ಟಿ । ಲಕ್ಷದಾವೆಲ್ಮಿಗಿಲು ಕುದುರೆಯ ಕಟ್ಟಿ । ವ್ರತದಿಂದ ಕಾಶಿ ಕ್ಷೇತ್ರಕ್ಕೆ ಮುಟ್ಟಿ । ತಮ್ಮ ಮುಂದಿನ ಕಾರ್ಯಕ್ಕೆ ಪ್ರಸ್ತಾಯ ಹುಟ್ಟಿ ಜೋ ಜೋ ॥೮॥

ರಾಯ ರಾಜರು ಕೂಡಿ ಕಾಶಿ ಕ್ಷೇತ್ರವ ಕಟ್ಟಿ ಕಾನ ಕಾನರೊಳಗೆ ಮಲ್ಲ ಕಾನ ತಾ ಹುಟ್ಟಿ । ಎಂಬತ್ತು ನಾಲ್ಕು ಕುದುರೆಯ ಕಟ್ಟಿ ರಾಯರ ಬೆನ್ನಟ್ಟಿ ಆನೆಗುಂದಿಗೆ ಮುಟ್ಟೀ ಜೋ ಜೋ ॥೯॥

ಬಂಟ ಕಾನರು ಕೂಡಿ ವಾಲಿ ಭಂಡಾರವನೊಡೆದು । ಭಂಗಾರದಾ ಹಂದಿಯೆ ತುಂಡನೆ ಕುಡಿದು।ಹನ್ನೊಂದಕ್ಷೋಹಿಣಿ ಹೆಚ್ಚಿನರಾಶಿಯಾ ಹಿಡಿದು ನಮ್ಮ । ಸಂಗಮೇಶ್ವರ ಬಂದು ದಂಡೆಲ್ಲ ಕಡಿದು ಜೋ ಜೋ ॥೧೦॥

ಶರಣಂಗಳು ನಂದೀಧ್ವಜಕಾಗಿಮುತ್ತಿ । ಶ್ರೀಮಲ್ಲಿಕಾರ್ಜುನಗೆ ಆರತಿಯು ನೆತ್ತಿ । ಶ್ರೀ ಗಂಗೆ ಪರ್ವತದ ಪಾತಾಳ ಬತ್ತಿ । ಅಲ್ಲಿ ಚಂದಗ್ರುಪ್ತರಾಯನಿಗೆ ವುಶ್ರಾಪಗಳೆತ್ತಿ ಜೋ ಜೋ ॥೧೧॥

ವೀರವಸಂತ ವಿರುಪಾಕ್ಷನಲ್ಲಿಗೆ ಬಂದು । ನೀವು ಶರಣ ಸದ್ಭಕ್ತರಾಗಿರಿಯಂದು । ಮುತ್ತೈದೆ ಸಹವಾಗಿ ಲಿಂಗವಾ ಕಟ್ಟೀ ರಾಜ್ಯ ಕಲ್ಯಾಣ ಕ್ಷೇತ್ರ ನಿಮಗಾಗಲೆಂದೂ ಜೋ ಜೋ ॥೧೨॥

Sri Vidyabharathi Book Centre, Sringeri

CC-0. In Public Domain. Digitized by eGangotri

ಕಲ್ಯಾಣ ಕ್ಷೇತ್ರದ ಲೆಕ್ಕವೇನೆಂದರೆ ಐದು ಸಾವಿರ ಐದನೂರಿಪ್ಪತ್ತೈಂಟು ವರ್ಷ ಸ್ಥಿರವಾಯಿತೆಂದೂ। ಸ್ವಯದಿ ಇಪ್ಪತ್ತೈದು ವರ್ಷ ಮಿಗಿಲಾದಿತೆಂದೂ। ಮುಂದೇಳು ಪಟ್ಟಕ್ಕೆ ಕೆಲಸರಿಯಾದಿತೆಂದು ಜೋ ಜೋ ॥೧೩॥

ಕಲ್ಯಾಣದೊಳಗೆ ಏನೇನಾನಂದ । ಕೈಲಾಸದಿಂದೆ ಶಿವನು ತಾ ಬಂದಾ। ಮುಂದಿನಾ ಪೂಜೆಗೆ ನಡಿಗಳ ತಂದಾ । ತನ್ನ ಕರುಣ ಪ್ರಸಾದವು ನಿಮಗಾಗ ಲಿಂದಾ ಜೋ ಜೋ ॥೧೪॥

ಜೋಗಳ ಪದಗಳ ಹಾಡಿದವರಿಗೆ ಮೂಜಗದೊಡೆಯನಾ ಕೃಪೆಗಳವ ರಿಗೆ। ಪಾಡಿದ ಪದಗಳ ಕೇಳಿದವರಿಗೆ ಶಿವನು ಬೇಡಿದ ವರಗಳ ಕೊಡುವವರಿಗೆ। ಜೋ ಜೋ ॥೧೫॥

ಶಿವಯೋಗದಲಿ ಸಿದ್ಧರಾಮಯ್ಯ ಗುರುವೆ । ಆದಿ ಸೋಲಾಪುರದಲ್ಲಿ ಯಿರುವದಯ್ಯಾ ಗುರುವೆ । ಗುರುವಿನ ಕರಜಾತ ಅರಿವೈಯ್ಯ ಗುರುವೇ । ನಮ್ಮ ಶರಣಗಣಂಗಳ ಕೂಡಿ ಬರಿವೈಯ ಗುರುವೇ । ಸಿದ್ಧರಾಮಯ್ಯ ಗುರುವೇ ಜೋ ಜೋ ॥೧೬॥

ಶ್ರೀ ಸಿದ್ಧರಾಮೇಶ್ವರ ದೇವರು ನಿರೂಪಿಸಿದ ಜೋಗುಳ ಕಾಲಜ್ಞಾನವು

॥ ಸಮಾಪ್ತಿ ॥

—೦—

ಶ್ರೀ ಸತ್ಯಾನಂದ ಪ್ರೆಸ್, ಅರಳೇಪೇಟೆ, ಬೆಂಗಳೂರು-560 053.
Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ನಮ್ಮ ಕೆಲವು ಪ್ರಕಟನೆಗಳು

ಗಣಪತಿ ಸಹಸ್ರನಾಮ
ಶಿವ ಸಹಸ್ರನಾಮ
ಅಂಜನೇಯ ಸಹಸ್ರನಾಮ
ಸುಬ್ರಹ್ಮಣ್ಯ ಸಹಸ್ರನಾಮ
ವಿಷ್ಣು ಸಹಸ್ರನಾಮ
ರಾಘವೇಂದ್ರ ಸಹಸ್ರನಾಮ
ನೃಸಿಂಹ ಸಹಸ್ರನಾಮ
ವೇಂಕಟೇಶ ಸಹಸ್ರನಾಮ
ಲಲಿತಾ ಸಹಸ್ರನಾಮ
ಲಕ್ಷ್ಮೀ ಸಹಸ್ರನಾಮ
ನವಗ್ರಹ ಜಪವಿಧಿ
ಶಿವಸ್ತೋತ್ರಮಾಲಾ
ದೇವೀ ಸ್ತೋತ್ರಮಾಲಾ
ಕುಬೇರ ಪೂಜಾವಿಧಿಃ

ವಿದ್ಯಾಭಾರತೀ ಅಂಡ್ ಸನ್ಸ್
ಚಿಕ್ಕಪೇಟೆ ಬೆಂಗಳೂರು-53

Sri Vidyabharathi Book Centre, Sringeri

KALIYUGADA KALAGNANA

Rs. 4.00